ಹಣಕಾಸು ಹೇಳಿಕೆಗಳ ಕುರಿತಾದ ನಮ್ಮ ಲೆಕ್ಕ ಪರಿಶೋಧನೆಗೆ ಸಂಬಂಧಿಸಿದಂತೆ ಇತರೆ ಮಾಹಿತಿಯನ್ನು ಓದುವುದು ನಮ್ಮ ಜವಾಬ್ದಾರಿಯಾಗಿರುತ್ತದೆ. ಈ ರೀತಿ ಮಾಡುವಾಗ ನಮ್ಮ ಲೆಕ್ಕ ಪರಿಶೋಧನಾ ಅವಧಿಯಲ್ಲಿ ನಾವು ಗಳಿಸಿದ ಜ್ಞಾನದಂತೆ ಹಣಕಾಸು ಹೇಳಿಕೆಗಳ ಜೊತೆ ಇತರೆ ಮಾಹಿತಿಯು ಹೊಂದಾಣಿಕೆ ಆಗುತ್ತಿಲ್ಲವೆಂದು, ಇಲ್ಲದಿದ್ದರೆ ವಸ್ತು ನಿಷ್ಠವಾಗಿ ತಪ್ಪಾಗಿ ಅರ್ಥೈಸಲಾಗಿದೆ ಎಂದು ಪರಿಗಣಿಸಬೇಕಾಗುತ್ತದೆ.

ನಾವು ಮಾಡಿದ ಕೆಲಸದ ಆಧಾರದ ಮೇಲೆ, ಈ ಇತರೆ ಮಾಹಿತಿಯು ವಾಸ್ತವಿಕ ತಪ್ಪು ಹೇಳಿಕೆಗಳಿಂದ ಕೂಡಿದೆ ಎಂಬ ತೀರ್ಮಾನಕ್ಕೆ ನಾವು ಬಂದಿದ್ದು, ಸತ್ಯವನ್ನು ನಾವು ವರದಿ ಮಾಡಬೇಕಾಗುತ್ತದೆ. ಈ ವಿಷಯದಲ್ಲಿ ನಾವು ಹೇಳುವುದು ಏನೂ ಇರುವುದಿಲ್ಲ.

**ಹಣಕಾಸು ಹೇಳಿಕೆಗಳಿಗೆ ಆಡಳಿತ ಮಂಡಳಿಯ ಜವಾಬ್ದಾರಿ:**

ಕಾಯ್ದೆಯ ಕಲಂ 134(5)ರಲ್ಲಿ ನಮೂದಿಸಲಾದ ವಿಷಯಗಳಿಗೆ ಸಂಬಂಧಿಸಿದಂತೆ ಭಾರತದಲ್ಲಿ ಸಾಮಾನ್ಯವಾಗಿ ಒಪ್ಪಿಕೊಂಡಿರುವ ಲೆಕ್ಕಪತ್ರಗಳಿಗೆ ಅನುಗುಣವಾಗಿ ಹಣಕಾಸು ಹೇಳಿಕೆಗಳ ತಯಾರಿ ಮತ್ತು ಮಂಡನೆಯು ಕಂಪನಿಯ ಹಣಕಾಸಿನ ಸ್ಥಿತಿ, ನಿರ್ವಹಣೆ ಮತ್ತು ನಗದು ಹರಿವಿನ ನೈಜತೆ ಮತ್ತು ನ್ಯಾಯೋಚಿತ ದೃಷ್ಟಿಕೋನವನ್ನು ಬಿಂಬಿಸಲಿದ್ದು, ಈ ಎಲ್ಲಾ ವಿಷಯಗಳಿಗೂ ಮಂಡಳಿಯ ನಿರ್ದೇಶಕರು ಜವಾಬ್ದಾರರಾಗಿರುತ್ತಾರೆ. ಕಾಯ್ದೆಯ ನಿಬಂಧನೆಗಳಿಗೆ ಅನುಗುಣವಾಗಿ ಕಂಪನಿಯ ಆಸ್ತಿಗಳ ಸಂರಕ್ಷಣೆಗಾಗಿ ಸಾಕಷ್ಟು ಲೆಕ್ಕಪತ್ರಗಳ ದಾಖಲೆಗಳ ನಿರ್ವಹಣೆ, ಮೋಸ, ವಂಚನೆ ನಡೆಯದಂತೆ ತಡೆಗಟ್ಟಲು ಮತ್ತು ಪತ್ತೆ ಹಚ್ಚಲು, ಸಾಕಷ್ಟು ಲೆಕ್ಕಪತ್ರ ನೀತಿಗಳ ಆಯ್ಕೆ ಮತ್ತು ಅನುಷ್ಠಾನ, ಸಮಂಜಸವಾದ ಮತ್ತು ಎಚ್ಚರಿಕೆಯ ಅಂದಾಜುಗಳು ಮತ್ತು ತೀರ್ಮಾನಗಳನ್ನು ಕೈಗೊಳ್ಳುವುದು ಮತ್ತು ಸಾಕಷ್ಟು ಆಂತರಿಕ

ಹಣಕಾಸಿನ ನಿಯಂತ್ರಣಗಳ ವಿನ್ಯಾಸ, ಅನುಷ್ಠಾನ ಮತ್ತು ನಿರ್ವಹಣೆಯನ್ನು ಮಾಡಲು ಲೆಕ್ಕಪತ್ರ ದಾಖಲೆಗಳ ನಿಖರತೆ ಮತ್ತು ನೆರವಿಗಾಗಿ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವುದು, ಹಣಕಾಸಿನ ಹೇಳಿಕೆಗಳು ವಸ್ತುತಃ ತಪ್ಪು ಹೇಳಿಕೆಗಳನ್ನು ಒಳಗೊಳ್ಳದಂತೆ, ತಪ್ಪಿನಿಂದಾಗಲಿ, ಮೋಸ/ವಂಚನೆಯಿಂದಾಗಲಿ ಅವು ತಪ್ಪು ಚಿತ್ರಣವನ್ನು ಬಿಂಬಿಸದಂತೆ ನೋಡಿಕೊಳ್ಳುವ ಏರ್ಪಾಡುಗಳನ್ನು ಮಾಡುವುದು ಈ ಜವಾಬ್ದಾರಿಯಲ್ಲಿ ಸೇರಿರುತ್ತದೆ.

ಹಣಕಾಸು ಹೇಳಿಕೆಗಳನ್ನು ತಯಾರಿಸುವಾಗ, ಕಂಪನಿಯನ್ನು ದಿವಾಳಿ ಮಾಡಲು ಉದ್ದೇಶಿಸಲಾಗಿದೆ ಅಥವಾ ಕಾರ್ಯಾಚರಣೆಯನ್ನು ನಿಲ್ಲಿಸಬೇಕು ಅಥವಾ ಅನ್ಯ ಮಾರ್ಗವಿಲ್ಲ ಎಂಬ ನಿರ್ಧಾರಕ್ಕೆ ಬಾರದೆ ಹೊರತು, ಚಲನಶೀಲದೊಂದಿಗೆ ಮುಂದುವರೆಸಿಕೊಂಡು ಹೋಗುವ ಸಾಮರ್ಥ್ಯವಿದೆ ಎಂದು ತೋರಿಸುವ ಜವಾಬ್ದಾರಿಯನ್ನು ಆಡಳಿತ ಮಂಡಳಿ ಹೊರಬೇಕು.

ಕಂಪನಿಯ ಹಣಕಾಸು ವರದಿ ಪ್ರಕ್ರಿಯೆಯ ಮೇಲ್ವಿಚಾರಣೆ ಮಾಡುವುದು ಸಹಾ ಮಂಡಳಿ ನಿರ್ದೇಶಕರ ಜವಾಬ್ದಾರಿಯಾಗಿರುತ್ತದೆ.

**ಹಣಕಾಸು ಹೇಳಿಕೆಗಳ ಲೆಕ್ಕಪರಿಶೋಧನೆಗೆ ಲೆಕ್ಕಪರಿಶೋಧಕರ ಜವಾಬ್ದಾರಿ:**

ನಮ್ಮ ಅಭಿಪ್ರಾಯವನ್ನೊಳಗೊಂಡ ಲೆಕ್ಕಪರಿಶೋಧನಾ ವರದಿ ನೀಡುವುದು ಮತ್ತು ಮೋಸ ಅಥವಾ ವಂಚನೆಯಿಂದ ಹಾಗೂ ವಾಸ್ತವಿಕ ತಪ್ಪು ಹೇಳಿಕೆಗಳಿಂದ ಒಟ್ಟಾರೆ ಈ ಹಣಕಾಸು ಹೇಳಿಕೆಗಳು ಮುಕ್ತವಾಗಿವೆ ಎಂದು ಭರವಸೆ ಪಡೆಯುವುದು ನಮ್ಮ ಉದ್ದೇಶವಾಗಿದೆ. ಎಸ್‌ಎಗಳ ಅನುಸಾರ ಲೆಕ್ಕಪರಿಶೋಧನೆಗೆ ಖಾತರಿ ನೀಡಲು ಆಗುವುದಿಲ್ಲವಾದರೂ, ಉನ್ನತ ಮಟ್ಟದ ಭರವಸೆಯು ಸಮಂಜಸವಾದ ಭರವಸೆಯಂತೂ ಆಗಿರುತ್ತದೆ. ಇವು ಅಸ್ತಿತ್ವದಲ್ಲಿದ್ದಾಗ ವಾಸ್ತವಿಕ ತಪ್ಪು ಹೇಳಿಕೆಗಳನ್ನು ಅವರು ಪತ್ತೆ ಹಚ್ಚುತ್ತಾರೆ. ಈ ಹಣಕಾಸು ಹೇಳಿಕೆಗಳ ಆಧಾರದ ಮೇಲೆ ಕೈಗೊಂಡ ಬಳಕೆದಾರರ ಆರ್ಥಿಕ ನಿರ್ಧಾರಗಳ ಮೇಲೆ ಸೂಕ್ತವಾಗಿ ಪ್ರಭಾವ ನೀಡುವ ಸಂಭವವಿದ್ದು, ಪ್ರತ್ಯೇಕವಾಗಿ ಅಥವಾ ಒಟ್ಟಾರೆಯಾಗಿ ಪರಿಗಣಿಸಬಹುದಾದಂತಹ ವಂಚನೆ ಅಥವಾ ತಪ್ಪಿನಿಂದ ಈ ತಪ್ಪು ಹೇಳಿಕೆಗಳು ಉಂಟಾಗಬಹುದಾಗಿದೆ.

ಎಸ್‌ಎಗಳ ಅನುಸಾರ ಲೆಕ್ಕಪರಿಶೋಧನೆಯ ಭಾಗವಾಗಿ, ಲೆಕ್ಕಪರಿಶೋಧನೆ ಉದ್ದಕ್ಕೂ ನಾವುಗಳು ವೃತ್ತಿಪರ ನ್ಯಾಯವನ್ನು ಆಚರಣೆ ಮಾಡಿದ್ದೇವೆ ಹಾಗೂ ವೃತ್ತಿಪರ ಸಂದೇಹಗಳನ್ನು ವ್ಯಕ್ತಪಡಿಸಿದ್ದೇವೆ. ಇದಲ್ಲದೇ ನಾವುಗಳು;

★ ನಮ್ಮ ಅಭಿಪ್ರಾಯಗಳಿಗೆ ಸೂಕ್ತ ಆಧಾರ ಒದಗಿಸಲು ಹಾಗೂ ಸಾಕಷ್ಟು ಲೆಕ್ಕಪರಿಶೋಧನಾ ಸಾಕ್ಷ್ಯಾಧಾರಗಳನ್ನು ಪಡೆಯಲು ಈ ಅಪಾಯಗಳಿಗೆ ಸ್ಪಂದಿಸುವ ಲೆಕ್ಕಪರಿಶೋಧನಾ ಪ್ರಕ್ರಿಯೆಗಳನ್ನು ವಿನ್ಯಾಸಗೊಳಿಸುತ್ತೇವೆ ಮತ್ತು ನಿರ್ವಹಿಸುತ್ತೇವೆ ಹಾಗೂ ವಂಚನೆ ಅಥವಾ ದೋಷದಿಂದ ಹಣಕಾಸು ಹೇಳಿಕೆಗಳಲ್ಲಿ ವಾಸ್ತವಿಕ ತಪ್ಪು ಹೇಳಿಕೆಗಳಿಂದಾಗುವ ಹಾನಿಯನ್ನು ನಿಗದಿ ಮಾಡುತ್ತೇವೆ ಹಾಗೂ ಗುರುತಿಸುತ್ತೇವೆ. ವಂಚನೆಯ ಪರಿಣಾಮವಾಗಿ ವಾಸ್ತವಿಕ ತಪ್ಪು ಹೇಳಿಕೆಗಳನ್ನು ಪತ್ತೆ ಮಾಡದಿರುವುದರಿಂದ ಉಂಟಾಗುವ ಹಾನಿಯು, ದೋಷದಿಂದ ಉಂಟಾಗುವ ಹಾನಿಗಿಂತಲೂ ದೊಡ್ಡದು. ಒಳಸಂಚು, ಖೋಟಾ ತಯಾರಿಕೆ, ಉದ್ದೇಶಪೂರ್ವಕ ಲೋಪಗಳು, ತಪ್ಪು ನಿರೂಪಣೆಗಳು ಅಥವಾ ಆಂತರಿಕ ನಿಯಂತ್ರಣವನ್ನು ಮೀರುವುದು ವಂಚನೆಯಲ್ಲಿ ಅಡಕವಾಗಿವೆ.

★ ಪರಿಸ್ಥಿತಿಗೆ ಸೂಕ್ತವೆನಿಸಿದ ಲೆಕ್ಕಪರಿಶೋಧನಾ ಪ್ರಕ್ರಿಯೆಗಳನ್ನು ವಿನ್ಯಾಸಗೊಳಿಸಲು ಲೆಕ್ಕಪರಿಶೋಧನೆಗೆ ಅಗತ್ಯವಾದ ಆಂತರಿಕ ಹಣಕಾಸು ನಿಯಂತ್ರಣಗಳ ಬಗ್ಗೆ ತಿಳುವಳಿಕೆ ಪಡೆಯುವುದು. ಕಾಯ್ದೆಯ ಕಲಂ 143(3)(i)ರಡಿ, ಕಂಪನಿಯು, ಸಾಕಷ್ಟು ಆಂತರಿಕ ಹಣಕಾಸು ನಿಯಂತ್ರಣ ವ್ಯವಸ್ಥೆ ಹೊಂದಿದ್ದಲ್ಲಿ ಮತ್ತು ಇಂತಹ ನಿಯಂತ್ರಣಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸುತ್ತಿದ್ದಲ್ಲಿ ಈ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸುವುದು ಸಹಾ ನಮ್ಮ ಜವಾಬ್ದಾರಿಯಾಗಿರುತ್ತದೆ.

★ ಆಡಳಿತ ಮಂಡಳಿ ಬಹಿರಂಗಗೊಳಿಸಿದ ಸಂಬಂಧಪಟ್ಟ ಪ್ರಕಟಣೆಗಳು ಮತ್ತು ಲೆಕ್ಕಪತ್ರ ಅಂದಾಜುಗಳ ಸಮಂಜಸತೆ ಹಾಗೂ ಬಳಸಿದ ಲೆಕ್ಕಪತ್ರ ನೀತಿಗಳ ಸೂಕ್ತತೆಯ ಮೌಲ್ಯಮಾಪನ.

★ ನಡೆಯುತ್ತಿರುವ ಸಂಸ್ಥೆಯ ಲೆಕ್ಕ ನಿರ್ವಹಣೆಯನ್ನು ಆಡಳಿತಮಂಡಳಿಯು ಬಳಕೆ ಮಾಡುತ್ತಿರುವ ಸೂಕ್ತಾ ಸೂಕ್ತತೆ ಮೇಲೆ ಮತ್ತು ಪಡೆದುಕೊಂಡಿರುವ ಲೆಕ್ಕಪರಿಶೋಧನೆ ಪುರಾವೆ ಆಧಾರದ ಮೇಲೆ ಕಂಪನಿಯು ನಡೆಯುತ್ತಿರುವ ಸಂಸ್ಥೆಯಾಗಿ ಮುಂದುವರೆಯಲು ಅದರ ಸಾಮರ್ಥ್ಯದ ಬಗ್ಗೆ ಗುರುತರವಾದ ಸಂದೇಹವನ್ನು ಉಂಟು ಮಾಡುವಂತಹ ಘಟನಾವಳಿಗಳು ಅಥವಾ ಪರಿಸ್ಥಿತಿಗಳು ಇರುವುದೇ ಎಂಬುದರ ಬಗ್ಗೆ ವಾಸ್ತವಿಕ ಅನಿಶ್ಚಿತತೆ ಇರುವುದೇ ಎಂಬುದನ್ನು ಅಂತಿಮವಾಗಿ ತೀರ್ಮಾನಿಸಲಾಗುವುದು. ವಾಸ್ತವಿಕ ಅನಿಶ್ಚಿತತೆ ಉಂಟಾಗಿದೆ ಎಂದು ತೀರ್ಮಾನಿಸಿದಲ್ಲಿ ಹಣಕಾಸು ಹೇಳಿಕೆಗಳಲ್ಲಿ ಸಂಬಂಧಪಟ್ಟ ಪ್ರಕಟಣೆಗಳ ಕುರಿತು ಅಥವಾ ಇಂತಹ ಪ್ರಕಟಣೆಗಳು ನಮ್ಮ ಅಭಿಪ್ರಾಯಗಳನ್ನು ಬದಲಾಯಿಸುವಷ್ಟು ಇಲ್ಲ ಎಂದು ನಮ್ಮ ಲೆಕ್ಕಪರಿಶೋಧನಾ ವರದಿಯಲ್ಲಿ ಇವುಗಳನ್ನು ಗಮನಕ್ಕೆ ತರುವ ಅಗತ್ಯವಿದೆ. ನಮ್ಮ ಲೆಕ್ಕ ಪರಿಶೋಧನಾ ದಿನಾಂಕದವರೆಗೂ ದೊರೆತ ಲೆಕ್ಕಪರಿಶೋಧನಾ ಸಾಕ್ಷ್ಯಗಳ ಆಧಾರದ ಮೇಲೆ ನಾವು ತೀರ್ಮಾನಕ್ಕೆ ಬರಬೇಕಾಗುತ್ತದೆ. ಆದರೆ ಭವಿಷ್ಯದಲ್ಲಿ ನಡೆಯುವ ಘಟನೆಗಳು ಅಥವಾ ಪರಿಸ್ಥಿತಿಗಳಿಂದಾಗಿ ನಡೆಯುತ್ತಿರುವ ಸಂಸ್ಥೆಯಾಗಿ ಮುಂದುವರೆಯುವುದು ನಿಂತು ಹೋಗಲಿದೆ. ಆಧಾರವಾಗಿರುವ ವ್ಯವಹಾರಗಳು ಮತ್ತು ಘಟನೆಗಳನ್ನು ಯೋಗ್ಯ ಪ್ರತಿಪಾದನೆಗಳೊಂದಿಗೆ ಗುರಿಮುಟ್ಟುವುದನ್ನು ಈ ಹಣಕಾಸು ಹೇಳಿಕೆಗಳು ಪ್ರತಿನಿಧಿಸಿದಲ್ಲಿ ಹಾಗೂ ಹಣಕಾಸು ಹೇಳಿಕೆಗಳ ವಿಷಯ, ಸ್ವರೂಪ ಮತ್ತು ಒಟ್ಟಾರೆ ಪ್ರತಿಪಾದನೆಗಳನ್ನು ಮೌಲ್ಯಮಾಪನ ಮಾಡುವುದು.

ಹಣಕಾಸು ಹೇಳಿಕೆಗಳಲ್ಲಿನ ತಪ್ಪು ಹೇಳಿಕೆಗಳ ಗಾತ್ರವು ಭೌತಿಕತೆಯಾಗಿದ್ದು, ಪ್ರತ್ಯೇಕವಾಗಿ ಅಥವಾ ಒಟ್ಟಾರೆ, ಹಣಕಾಸು ಹೇಳಿಕೆಗಳ ಆರ್ಥಿಕ ನಿರ್ಧಾರಗಳನ್ನು ಸಮಂಜಸ ಜ್ಞಾನದೊಂದಿಗೆ ಬಳಕೆ ಮಾಡುವವರೂ ಸಹಾ ಪ್ರಭಾವಕ್ಕೆ ಒಳಗಾಗುವ ಸಂಭವ ಇದೆ. ನಾವು ಪರಿಮಾಣಾತ್ಮಕ ಭೌತಿಕತೆ ಹಾಗೂ ಗುಣಾತ್ಮಕ ಅಂಶಗಳನ್ನು (i) ನಮ್ಮ ಲೆಕ್ಕಪರಿಶೋಧನಾ ಕೆಲಸದ ವ್ಯಾಪ್ತಿಯನ್ನು ಯೋಜಿಸಲು ಮತ್ತು ನಮ್ಮ ಕೆಲಸದ ಫಲಿತಾಂಶವನ್ನು ಮೌಲ್ಯಮಾಪನ ಮಾಡಲು; ಹಾಗೂ (ii) ಹಣಕಾಸು ಹೇಳಿಕೆಗಳಲ್ಲಿ ಗುರುತಿಸಲಾದ ತಪ್ಪು ಹೇಳಿಕೆ ಪ್ರಭಾವವನ್ನು ಮೌಲ್ಯಮಾಪನ ಮಾಡುವುದರ ಮೇಲೆ ನಿರ್ಧರಿಸುತ್ತೇವೆ.

ನಮ್ಮ ಲೆಕ್ಕಪರಿಶೋಧನೆಯಲ್ಲಿ ನಾವು ಗುರುತಿಸುವ ಆಂತರಿಕ ನಿಯಂತ್ರಣದಲ್ಲಿನ ಯಾವುದೇ ಲೋಪಗಳು ಒಳಗೊಂಡಂತೆ ಪ್ರಮುಖ ಲೆಕ್ಕಪರಿಶೋಧನೆಯಲ್ಲಿ ಪತ್ತೆಯಾದ ವಿಷಯಗಳು ಹಾಗೂ ಲೆಕ್ಕಪರಿಶೋಧನೆಯ ಅವಧಿ ಮತ್ತು ಯೋಜನೆಯ ವ್ಯಾಪ್ತಿ ಹಾಗೂ ಇತರೆ ವಿಷಯಗಳನ್ನು ನಾವು ಆಡಳಿತ ನಡೆಸುವವರ ಗಮನಕ್ಕೆ ತರುತ್ತೇವೆ.

ಇದಲ್ಲದೆ, ಸ್ವಾತಂತ್ರ್ಯಕ್ಕೆ ಸಂಬಂಧಿಸಿದಂತೆ ಅನುಸರಣೆ ಮಾಡುವ ಪ್ರಮುಖ ನೈತಿಕ ಅವಶ್ಯಕತೆಗಳು ಹಾಗೂ ನಮ್ಮ ಸ್ವಾತಂತ್ರ್ಯವನ್ನು ಸಮಂಜಸವಾಗಿ ಹೊರುವ ಇತರೆ ವಿಷಯಗಳು ಹಾಗೂ ಎಲ್ಲಾ ಸಂಬಂಧಗಳು ಮತ್ತು ಅನ್ವಯಿಸುವ ಕಡೆ ಸಂಬಂಧಪಟ್ಟ ವಿಷಯಗಳನ್ನು ರಕ್ಷಿಸುವುದಾಗಿ ನಾವು ಸಂಬಂಧಪಟ್ಟವರ ಗಮನಕ್ಕೆ ಹೇಳಿಕೆ ಮೂಲಕ ಒದಗಿಸುತ್ತೇವೆ. ಆಡಳಿತ ಮಂಡಳಿಯ ಜೊತೆಗಿನ ನಮ್ಮ ಮಾತುಕತೆಯಲ್ಲಿ, ಪ್ರಸ್ತುತ ಅವಧಿಯ ಹಣಕಾಸು ಹೇಳಿಕೆಗಳ ಲೆಕ್ಕಪರಿಶೋಧನೆಯಲ್ಲಿ ಹೆಚ್ಚು ಪ್ರಾಮುಖ್ಯತೆಯುಳ್ಳ ವಿಷಯಗಳನ್ನು ನಾವು ನಿರ್ಧರಿಸುವೆವು ಮತ್ತು ಇವು ಲೆಕ್ಕಪರಿಶೋಧನೆಯ ಪ್ರಮುಖ ವಿಚಾರಗಳಾಗಿರುವವು. ವಿಷಯದ ಕುರಿತು ಸಾರ್ವಜನಿಕವಾಗಿ ಬಹಿರಂಗಪಡಿಸುವಿಕೆಯನ್ನು ಕಾನೂನು ಮತ್ತು ನಿಬಂಧನೆಗಳು ತಡೆಯದ ಹೊರತು, ಈ ವಿಷಯಗಳ ಬಗ್ಗೆ ನಾವು ನಮ್ಮ ಲೆಕ್ಕಪರಿಶೋಧನಾ ವರದಿಯಲ್ಲಿ ವಿವರಿಸುತ್ತೇವೆ. ಅತ್ಯಂತ ಅಪರೂಪದ ಸಂದರ್ಭಗಳಲ್ಲಿ ವರದಿಯ ವಿಷಯವನ್ನು ಬಹಿರಂಗಗೊಳಿಸಬಾರದು ಎಂದು ನಾವು ನಿರ್ಧರಿಸುವೆವು. ಏಕೆಂದರೆ ಹಾಗೆ ಮಾಡುವುದರಿಂದ ಪ್ರತಿಕೂಲ ಪರಿಣಾಮಗಳು ಉಂಟಾಗಿ ಸಾರ್ವಜನಿಕ ಹಿತಾಸಕ್ತಿ ಪ್ರಯೋಜನಗಳನ್ನು ಮೀರುವ ನಿರೀಕ್ಷೆಯಿದೆ.

**ಇತರೆ ಕಾನೂನಾತ್ಮಕ ಮತ್ತು ನಿಯಂತ್ರಕ ಅವಶ್ಯಕತೆಗಳ ಮೇಲೆ ವರದಿ:**

1) ಕಂಪನಿಗಳ ಕಾಯ್ದೆ 2013ರ ಕಲಂ 143ರ ಉಪ ಕಲಂ (11) ರ ಅನ್ವಯ ಭಾರತ ಸರ್ಕಾರ ನೀಡಿರುವ (ಆದೇಶ) 2020, ಕಂಪನಿಗಳ ಆದೇಶಕ್ಕೆ (ಲೆಕ್ಕಪರಿಶೋಧಕರ ವರದಿ) ಅಗತ್ಯವಿರುವಂತೆ ಅನ್ವಯಿಸುವ ಮಟ್ಟಿಗೆ ಆದೇಶದ ಪ್ಯಾರಾ ಗ್ರಾಫ್ 3 ಮತ್ತು 4ರಲ್ಲಿ ನಿರ್ದಿಷ್ಟಪಡಿಸಿದ ವಿಷಯಗಳ ಕುರಿತು ಅನುಬಂಧ-ಎ ರಲ್ಲಿ ಹೇಳಿಕೆ ನೀಡಿದ್ದೇವೆ.

2) ಕಾಯ್ದೆಯ ಕಲಂ 143(3)ಕ್ಕೆ ಅಗತ್ಯವಿರುವಂತೆ ನಾವು ವರದಿ ನೀಡುವುದು ಏನೆಂದರೆ;

ಎ) ನಮ್ಮ ಲೆಕ್ಕಪರಿಶೋಧನಾ ಉದ್ದೇಶಗಳಿಗೆ ನಂಬಿಕೆ ಅತ್ಯಗತ್ಯವಾಗಿದ್ದು, ನಮಗಿರುವ ತಿಳಿವಳಿಕೆಯಲ್ಲಿ ಎಲ್ಲಾ ಮಾಹಿತಿ ಮತ್ತು ವಿವರಣೆಗಳನ್ನು ನಾವು ಕೇಳಿದ್ದೇವೆ ಮತ್ತು ಪಡೆದಿದ್ದೇವೆ.

ಬಿ) ನಮ್ಮ ಅಭಿಪ್ರಾಯದಲ್ಲಿ, ಕಂಪನಿಯು ಕಾನೂನಿಗೆ ಅಗತ್ಯವಿರುವ ಸೂಕ್ತ ಲೆಕ್ಕದ ಪುಸ್ತಕಗಳನ್ನು ಈವರೆಗೆ ನಿರ್ವಹಣೆ ಮಾಡಿದ್ದು, ಪುಸ್ತಕಗಳನ್ನು ನಾವು ಪರೀಕ್ಷೆಗೆ ಒಳಪಡಿಸಿದಾಗ ಈ ವಿಷಯ ಮನವರಿಕೆಯಾಗಿದೆ.

ಸಿ) ಈ ವರದಿಯೊಂದಿಗೆ ಆರ್ಥಿಕ ವಿವರ ಪಟ್ಟಿ, ಲಾಭ ಮತ್ತು ನಷ್ಟದ ತಃಖ್ತೆ ಹಾಗೂ ನಗದು ಹರಿವಿನೊಂದಿಗೆ ವ್ಯವಹರಿಸುವ ಹೇಳಿಕೆಗಳಿದ್ದು, ಅವುಗಳು ಲೆಕ್ಕದ ಪುಸ್ತಕಗಳ ಜೊತೆ ಒಪ್ಪಂದಕ್ಕೆ ಅನುಗುಣವಾಗಿವೆ.

ಡಿ) ನಮ್ಮ ಅಭಿಪ್ರಾಯದಲ್ಲಿ, ಕಂಪನಿಗಳ (ಲೆಕ್ಕಗಳು) ನಿಯಮಗಳು, 2014ರ ನಿಯಮ 7ರ ಜೊತೆ ಓದಿಕೊಂಡಂತೆ ಕಾಯ್ದೆಯ ಕಲಂ 133ರಡಿ ನಿರ್ದಿಷ್ಟಪಡಿಸಿದ ಲೆಕ್ಕಪತ್ರಗಳ ಮಾನದಂಡವನ್ನು, ಮೇಲೆ ತಿಳಿಸಿರುವ ಹಣಕಾಸು ಹೇಳಿಕೆಗಳು ಅನುಸರಿಸಿವೆ.

ಇ) 1ನೇ ಏಪ್ರಿಲ್ 2022ರಲ್ಲಿದ್ದಂತೆ ನಿರ್ದೇಶಕರಿಂದ ಸ್ವೀಕರಿಸಿರುವ ಲಿಖಿತ ಮನವಿಯ ಆಧಾರದ ಮೇರೆಗೆ ಕಾಯ್ದೆಯ ಕಲಂ 164(2)ಕ್ಕೆ ಅನುಗುಣವಾಗಿ 31.03.2022ರವರೆಗೆ ನಿರ್ದೇಶಕರಾಗಿ ನೇಮಕಗೊಂಡ ಯಾವುದೇ ನಿರ್ದೇಶಕರೂ ಅನರ್ಹಗೊಂಡಿರುವುದಿಲ್ಲ.

ಎಫ್) ಮೇಲ್ಕಂಡ ಚಾಲ್ತಿಯಲ್ಲಿರುವ ವಾಕ್ಯವೃಂದಕ್ಕೆ ಸಂಬಂಧಿಸಿದ ವಾಸ್ತವಿಕ ಅನಿಶ್ಚಿತತೆ ಅಡಿ ವಿವರಿಸಲಾದ ಚಾಲ್ತಿಯಲ್ಲಿರುವ ವಿಷಯವು, ನಮ್ಮ ಅಭಿಪ್ರಾಯದಲ್ಲಿ ಕಂಪನಿಯ ಕಾರ್ಯನಿರ್ವಹಣೆಯ ಮೇಲೆ ಪ್ರತಿಕೂಲ ಪರಿಣಾಮ ಬೀರುವ ಸಾಧ್ಯತೆ ಇದೆ.

ಜಿ) ಕಂಪನಿಯ ಹಣಕಾಸು ವರದಿಯ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣದ ಸಮರ್ಪಕತೆಗೆ ಸಂಬಂಧಿಸಿದಂತೆ ಹಾಗೂ ಇಂತಹ ನಿಯಂತ್ರಣಗಳ ಕಾರ್ಯಾಚರಣೆಯ ಪರಿಣಾಮಕಾರಿತ್ವಕ್ಕಾಗಿ, ''ಅನುಬಂಧ-ಬಿ'' ಯಲ್ಲಿರುವ ನಮ್ಮ ಪ್ರತ್ಯೇಕ ವರದಿಯನ್ನು ನೋಡುವುದು.

(ಹೆಚ್) ಕಂಪನಿಗಳ ನಿಯಮಗಳು 2014ರ (ಲೆಕ್ಕಪರಿಶೋಧನೆ ಮತ್ತು ಲೆಕ್ಕಪರಿಶೋಧಕರು) ನಿಯಮ 11 ರ ಅನುಸಾರವಾಗಿ ಲೆಕ್ಕಪರಿಶೋಧನಾ ವರದಿಯಲ್ಲಿ ಇತರೆ ವಿಷಯಗಳನ್ನು ಸೇರಿಸಬೇಕಿದೆ. ನಮ್ಮ ಅಭಿಪ್ರಾಯದಲ್ಲಿ ಹಾಗೂ ನಮಗೆ ನೀಡಿರುವ ಮಾಹಿತಿಯಂತೆ ಮತ್ತು ನಮಗೆ ನೀಡಿರುವ ವಿವರಣೆಯಂತೆ;

(i) ಕಂಪನಿಯು ತನ್ನ ಹಣಕಾಸು ಹೇಳಿಕೆಗಳಲ್ಲಿ ಬಾಕಿ ಉಳಿದಿರುವ ದಾವೆಗಳಿಂದ ಹಣಕಾಸು ಸ್ಥಿತಿಗತಿಯ ಮೇಲೆ ಬೀರುವ ಪ್ರಭಾವವನ್ನು ಬಹಿರಂಗಪಡಿಸಿದೆ. ಹಣಕಾಸು ಹೇಳಿಕೆಗಳ ಟಿಪ್ಪಣಿ ಸಂಖ್ಯೆ: 16(II)(2)ನ್ನು ನೋಡುವುದು.

(ii) ಯಾವುದೇ ವಾಸ್ತವಿಕ ನಿರೀಕ್ಷಿತ ನಷ್ಟ ಉಂಟಾಗಲು ಕಂಪನಿಯು, ಉತ್ಪನ್ನಗಳ ಗುತ್ತಿಗೆಯನ್ನೊಳಗೊಂಡಂತೆ ದೀರ್ಘಾವಧಿ ಗುತ್ತಿಗೆಗಳನ್ನು ಹೊಂದಿರುವುದಿಲ್ಲ.

(iii) ಹೂಡಿಕೆದಾರರ ಶಿಕ್ಷಣ ಹಾಗೂ ರಕ್ಷಣಾ ನಿಧಿಗೆ ಕಂಪನಿಯಿಂದ ಯಾವುದೇ ಹಣ ವರ್ಗಾವಣೆ ಆಗುವ ಅಗತ್ಯವಿಲ್ಲ.

(iv) ಲೆಕ್ಕಾಚಾರ ಟಿಪ್ಪಣಿಗಳಲ್ಲಿರುವ ವಿಷಯಗಳ ಹೊರತಾಗಿ ಈ ಕೆಳಗೆ ತಿಳಿಸಿರುವ ವಿಚಾರಗಳು ತನಗೆ ತಿಳಿದಿರುವಂತೆ ಮತ್ತು ತನ್ನ ನಂಬಿಕೆಯೊಂದಿಗೆ ತಿಳಿಸಿರುವುದಾಗಿ ಆಡಳಿತ ಮಂಡಳಿಯು ತಿಳಿಸಿದೆ.

ಎ) ಕಂಪನಿಯ ಪರವಾಗಿ (ಕೊನೆಯ ಫಲಾನುಭವಿ) ಅಥವಾ ಕಂಪನಿಯ ಜೊತೆ ಯಾವುದೇ ರೂಪದಲ್ಲಿ ಗುರುತಿಸಿಕೊಂಡಿರುವ ಇತರೆ ವ್ಯಕ್ತಿಗಳು ಅಥವಾ ಘಟಕಗಳಲ್ಲಿ ಪ್ರತ್ಯಕ್ಷವಾಗಲಿ ಅಥವಾ ಪರೋಕ್ಷವಾಗಲಿ ಸಾಲ ಮಾಡುವುದಾಗಲಿ ಅಥವಾ ಹೂಡಿಕೆ ಮಾಡುವುದಾಗಲಿ ಕಂಪನಿಯು ಮಾಡಿಲ್ಲ ಅಥವಾ ತಿಳಿವಳಿಕೆಯೊಂದಿಗೆ ವಿದೇಶಿ ಘಟಕಗಳು (ಮಧ್ಯಸ್ಥಗಾರರು) ಸೇರಿದಂತೆ ಯಾವುದೇ ಘಟಕಗಳು ಅಥವಾ ವ್ಯಕ್ತಿ(ಗಳು) ಗಳಿಗೆ ಕಂಪನಿಯು ಮುಂಗಡವಾಗಿ ಅಥವಾ ಸಾಲದ ರೂಪದಲ್ಲಿ ಅಥವಾ ಹೂಡಿಕೆ ರೂಪದಲ್ಲಿ ಬಂಡವಾಳ ನೀಡಿರುವುದಿಲ್ಲ ಅಥವಾ ಕೊನೆಯ ಫಲಾನುಭವಿ ಪರವಾಗಿ ಯಾವುದೇ ಭದ್ರತೆ ಅಥವಾ ಗ್ಯಾರೆಂಟಿ ಒದಗಿಸಿರುವುದಿಲ್ಲ.

ಬಿ) ಹೂಡಿಕೆ ಸಂಸ್ಥೆಗಳ ಪರವಾಗಿ (ಕೊನೆಯ ಫಲಾನುಭವಿಗಳು) ಅಥವಾ ಅವುಗಳ ಜೊತೆ ಯಾವುದೇ ರೂಪದಲ್ಲಿ ಗುರುತಿಸಿಕೊಂಡಿರುವ ಇತರೆ ವ್ಯಕ್ತಿಗಳು ಅಥವಾ ಘಟಕಗಳು ಪ್ರತ್ಯಕ್ಷವಾಗಲಿ ಅಥವಾ ಪರೋಕ್ಷವಾಗಲಿ ಸಾಲ ಕೊಡುವುದಾಗಲಿ ಅಥವಾ ಹೂಡಿಕೆ ಮಾಡುವುದಾಗಲಿ ಕಂಪನಿಯು ಮಾಡಿಲ್ಲ ಎಂಬ ತಿಳಿವಳಿಕೆಯೊಂದಿಗೆ ವಿದೇಶಿ ಘಟಕಗಳು (''ಹೂಡಿಕೆ ಮಾಡುವ ಸಂಸ್ಥೆಗಳು'') ಸೇರಿದಂತೆ ಯಾವುದೇ ಘಟಕಗಳು ಅಥವಾ ವ್ಯಕ್ತಿ(ಗಳು) ಗಳಿಂದ ಕಂಪನಿಯು ಬಂಡವಾಳವನ್ನು ಸ್ವೀಕರಿಸಿರುವುದಿಲ್ಲ.

ಸಿ) ಆ ಪರಿಸ್ಥಿತಿಗಳಲ್ಲಿ ಸರಿಯಾಗಿದೆ ಮತ್ತು ಸೂಕ್ತವಾಗಿದೆ ಎಂದು ಪರಿಗಣಿಸಿದಾಗ ನಡೆಸಿದ ಲೆಕ್ಕಪರಿಶೋಧನಾ ಪ್ರಕ್ರಿಯೆಗಳ ಆಧಾರದಲ್ಲಿ ಮೇಲಿನ ವಿಷಯ (ಎ) ಮತ್ತು (ಬಿ) ರಲ್ಲಿನ ವಿಚಾರಗಳಲ್ಲಿ ಯಾವುದೇ ವಾಸ್ತವಿಕ ತಪ್ಪು ಹೇಳಿಕೆಗಳಿವೆ ಎಂದು ನಂಬಲು ಕಾರಣಗಳು ಯಾವುದೂ ನಮ್ಮ ಗಮನಕ್ಕೆ ಬಂದಿರುವುದಿಲ್ಲ.

(v) ಕಂಪನಿಯು 2021–22ನೇ ವರ್ಷದ ಅವಧಿಯಲ್ಲಿ ಯಾವುದೇ ಲಾಭಾಂಶವನ್ನು ಘೋಷಣೆ ಮಾಡಿರುವುದಿಲ್ಲ.

(3) ಕಾಯ್ದೆಯ ಕಲಂ 197 (16)ರ ಅಗತ್ಯಗಳಿಗೆ ಅನುಗುಣವಾಗಿ ಲೆಕ್ಕಪರಿಶೋಧನಾ ವರದಿಯಲ್ಲಿ ಇತರೆ ವಿಷಯಗಳನ್ನು ಸೇರಿಸಲಾಗಿದೆ. ತಿದ್ದುಪಡಿಯಂತೆ; ಭಾರತ ಸರ್ಕಾರದ ಕಾರ್ಪೊರೇಟ್ ಸಚಿವಾಲಯವು 5ನೇ ಜೂನ್ 2015ರಲ್ಲಿ ಹೊರಡಿಸಿದ ಪ್ರಕಟಣೆ ಸಂಖ್ಯೆ: ಜಿಎಸ್ಆರ್ 463 (ಇ) ರ ಅನ್ವಯ, ಕಲಂ 197 ಸರ್ಕಾರಿ ಕಂಪನಿಗಳಿಗೆ ಅನ್ವಯಿಸುವುದಿಲ್ಲ.

(4) 2013ರ ಕಂಪನಿಗಳ ಕಾಯ್ದೆಯ ಕಲಂ 143(5)ರಡಿ ನಿರ್ದೇಶನಕ್ಕೆ ಸಂಬಂಧಿಸಿದಂತೆ, ನಾವು ಈ ಕೆಳಕಂಡಂತೆ ವರದಿ ಮಾಡುತ್ತೇವೆ:

(i) ಕಂಪನಿಯು ಲೆಕ್ಕಪುಸ್ತಕಗಳನ್ನು ಟ್ಯಾಲಿ ಅಕೌಂಟಿಂಗ್ ಸಾಫ್ಟ್‌ವೇರ್‌ನಲ್ಲಿ ನಿರ್ವಹಣೆ ಮಾಡುತ್ತಿದೆ. ಆದರೆ ಕೆಲವು ಪ್ರಕ್ರಿಯೆಗಳಾದ, ವೇತನ ಪ್ರಕ್ರಿಯೆ, ವೆಚ್ಚಗಳ ಅನುಮೋದನೆ ಮುಂತಾದವುಗಳು ದೈಹಿಕವಾಗಿ ನಡೆಯುತ್ತಿದೆ ಹಾಗೂ ಮುಂದಿನ ದಿನಗಳಲ್ಲಿ ಎಂಟ್ರಿಗಳ ಮೂಲಕ ಸಾಫ್ಟ್‌ವೇರ್‌ಗೆ ಅಳವಡಿಸಿರುತ್ತಾರೆ. ನಾವು ಅಳವಡಿಸಿಕೊಂಡಿರುವ ಲೆಕ್ಕ ಪರಿಶೋಧನಾ ಪ್ರಕ್ರಿಯೆಯು, ಕೆಲವು ಕ್ಷೇತ್ರಗಳಲ್ಲಿ ದೈಹಿಕ ಪ್ರಕ್ರಿಯೆಯಿಂದಾಗಿ ಲೆಕ್ಕಪತ್ರಗಳ ಸಮಗ್ರತೆಯ ಮೇಲೆ ಯಾವುದೇ ವಿಶೇಷ ಕಾಳಜಿಯನ್ನು ಬಹಿರಂಗಪಡಿಸಿಲ್ಲ.

(ii) ಕಂಪನಿಯು ಇಡೀ ವರ್ಷ ಯಾವುದೇ ಸಾಲವನ್ನು ಮಾಡಿಲ್ಲ, ಆದ್ದರಿಂದ ಸಾಲಗಳ ಪುನರ್‌ರಚನೆ ಪ್ರಶ್ನೆ ಉದ್ಭವಿಸುವುದಿಲ್ಲ.

(iii) ನಮ್ಮ ಅಭಿಪ್ರಾಯದಲ್ಲಿ, ಹಾಗೂ ನಮಗೆ ನೀಡಿರುವ ಮಾಹಿತಿ ಮತ್ತು ಒದಗಿಸಿರುವ ವಿವರಣೆಯಂತೆ ಚಾಲ್ತಿ ವರ್ಷದಲ್ಲಿ ಕಂಪನಿ, ಕೇಂದ್ರ/ರಾಜ್ಯದ ಏಜೆನ್ಸಿಗಳಿಂದ ವಿಶೇಷ ಯೋಜನೆಗಳಿಗಾಗಿ ಯಾವುದೇ ನಿಧಿಗಳನ್ನು ಸ್ವೀಕರಿಸಿಲ್ಲ.

(iv) ನಗದು ಮತ್ತು ಬ್ಯಾಂಕ್ ಉಳಿತಾಯ ಋಜುವಾತುಗೆ ಸಂಬಂಧಿಸಿದಂತೆ ''ಅನುಬಂಧ-ಸಿ''ನಲ್ಲಿ ನಮ್ಮ ಟೀಕೆ ಟಿಪ್ಪಣಿಗಳನ್ನು ದಾಖಲಿಸಿದ್ದೇವೆ.

(v) ಲೆಕ್ಕಪುಸ್ತಕದಲ್ಲಿ ಅನಿಶ್ಚಿತ ಶೀರ್ಷಿಕೆಯಡಿ ವ್ಯವಹರಿಸುವ ಯಾವುದೇ ವಿವರಿಸಲಾಗದ ಉಳಿತಾಯವನ್ನು ಕಂಪನಿ ಹೊಂದಿರುವುದಿಲ್ಲ.

**ಅಣ್ಣಾರಾವ್ & ಶ್ರೀಕಂಠ ಪರವಾಗಿ**
**ಚಾರ್ಟರ್ಡ್ ಅಕೌಂಟೆಂಟ್ಸ್**
**ಎಫ್ಆರ್ಎನ್ : 009255S**
**ಸಹಿ/-**
**ಸಿಎ ಶ್ರೀಕಂಠ ಜಿ. ಕುಲಕರ್ಣಿ**
**ಪಾಲುದಾರರು**
**ಸದಸ್ಯತ್ವ ಸಂ. 027422**
**ಯುಡಿಐಎನ್: 22027422ANKWDE9724**

ಸ್ಥಳ : ಬೆಂಗಳೂರು
ದಿನಾಂಕ : 16.07.2022

# ಸ್ವತಂತ್ರ ಲೆಕ್ಕಪರಿಶೋಧಕರ ವರದಿಗೆ ಅನುಬಂಧ "ಎ"

ಬೆಂಗಳೂರು ವಿಮಾನ ನಿಲ್ದಾಣ ರೈಲು ಸಂಪರ್ಕ ನಿಯಮಿತದ ನಮ್ಮ ವರದಿಯ ಶೀರ್ಷಿಕೆ ''ಇತರೆ ಕಾನೂನಾತ್ಮಕ ಮತ್ತು ನಿಯಂತ್ರಕ ಅವಶ್ಯಕತೆಗಳ ಮೇಲಿನ ವರದಿ'' ಅಡಿ ಪ್ಯಾರಾಗ್ರಾಫ್‌ನಲ್ಲಿ ಉಲ್ಲೇಖಿಸಿರುವ ಅನುಬಂಧ–ಎ.

**i) ಆಸ್ತಿ , ಘಟಕ ಮತ್ತು ಸಲಕರಣೆಗಳು:**

ಎ) (ಎ). ಆಸ್ತಿ ಘಟಕ ಮತ್ತು ಸಲಕರಣೆಗಳಿಗೆ ಸಂಬಂಧಿಸಿದ ವಸ್ತು ಸ್ಥಿತಿ ಹಾಗೂ ಪರಿಮಾಣಾತ್ಮಕ ವಿವರಗಳೂ ಸೇರಿದಂತೆ ಸಂಪೂರ್ಣ ಮಾಹಿತಿಯನ್ನೊಳಗೊಂಡ ಸೂಕ್ತ ದಾಖಲೆಗಳನ್ನು ಕಂಪನಿ ನಿರ್ವಹಣೆ ಮಾಡಿದೆ. (ಬಿ) ಕಂಪನಿಯು ಅಗೋಚರವಾದ ಆಸ್ತಿಯನ್ನು ಹೊಂದಿರುವುದಿಲ್ಲ.

ಬಿ) ನಮಗೆ ಸಿಕ್ಕಿರುವ ಮಾಹಿತಿ ಮತ್ತು ವಿವರಣೆಯಂತೆ ಆಸ್ತಿ, ಘಟಕ ಮತ್ತು ಸಲಕರಣೆಗಳನ್ನು ಆಡಳಿತ ಮಂಡಳಿ ಖುದ್ದಾಗಿ ಹಂತಹಂತವಾಗಿ ಪರಿಶೀಲನೆ ಮಾಡಿದ್ದು, ಕಂಪನಿಯ ಗಾತ್ರ ಮತ್ತು ಆಸ್ತಿಯ ದೃಷ್ಟಿಯಿಂದ ಸಮಂಜಸವಾಗಿ ಇದೆ. ನಮಗೆ ನೀಡಿರುವ ವಿವರಣೆಯಲ್ಲಿ ಯಾವುದೇ ಭೌತಿಕ ವ್ಯತ್ಯಾಸವೂ ಅಂತಹ ಸತ್ಯಾಪನದಲ್ಲಿ ನಮ್ಮ ಗಮನಕ್ಕೆ ಬಂದಿಲ್ಲ.

ಸಿ) ನಮಗೆ ನೀಡಿರುವ ಮಾಹಿತಿ ಮತ್ತು ವಿವರಣೆಯಂತೆ, ನಮ್ಮ ದಾಖಲೆಗಳ ಪರಿಶೀಲನೆಯ ಸಂದರ್ಭದಲ್ಲಿ ಹಣಕಾಸಿನ ಹೇಳಿಕೆಗಳಲ್ಲಿ ಬಹಿರಂಗಪಡಿಸಿದಂತೆ ಯಾವುದೇ ಸ್ಥಿರಾಸ್ತಿಯೂ ಕಂಡು ಬಂದಿರುವುದಿಲ್ಲ. (ಕಂಪನಿಯು ಭೋಗ್ಯದಾರನಾಗಿರುವ ಆಸ್ತಿಗಳನ್ನು ಹೊರತುಪಡಿಸಿ ಹಾಗೂ ಗುತ್ತಿಗೆ ಒಪ್ಪಂದವು ಭೋಗ್ಯದಾರನ ಪರವಾಗಿ ಸಮುಚಿತವಾಗಿ ಬರೆದು ಕೊಡಲಾಗಿದೆ.)

**ii) ಇನ್ವೆಂಟರಿ (ವಿವರಣಾ ಪಟ್ಟಿ):**

ವರ್ಷದ ಅವಧಿಯಲ್ಲಿ ಕಂಪನಿಯು ಯಾವುದೇ ವಿವರಣಾ ಪಟ್ಟಿಯನ್ನು ಹೊಂದಿರುವುದಿಲ್ಲ. ಆದ್ದರಿಂದ ಆದೇಶದ ಪರಿಚ್ಛೇದ 3(ii) ಅನ್ವಯವಾಗುವುದಿಲ್ಲ.

**iii) ಸಾಲಗಳು (ಕಂಪನಿಗಳ ಕಾಯ್ದೆ 2013ರ ಕಲಂ 189):**

ಕಾಯ್ದೆಯ ಕಲಂ 189ರಡಿ ನಿರ್ವಹಣೆ ಮಾಡಿರುವ ರಿಜಿಸ್ಟರ್‌ನಲ್ಲಿ ವ್ಯವಹರಿಸಿರುವ ವ್ಯಕ್ತಿಗಳಿಗೆ ಕಂಪನಿಯು ಯಾವುದೇ ಸಾಲವನ್ನು ನೀಡಿಲ್ಲ ಅಥವಾ ಸಾಲ, ಮುಂಗಡದ ರೂಪದಲ್ಲಿ ಮುಂಗಡ ಒದಗಿಸಿಲ್ಲ ಅಥವಾ ಭದ್ರತೆ ಒದಗಿಸಿಲ್ಲ. ಆದ್ದರಿಂದ ಆದೇಶದ ಕಲಂ 3(iii) ಅನ್ವಯವಾಗುವುದಿಲ್ಲ

**(iv) ಸಾಲಗಳು, ಹೂಡಿಕೆಗಳು, ಗ್ಯಾರೆಂಟಿ ಮತ್ತು ಭದ್ರತೆ (ಕಂಪನಿಗಳ ಕಾಯ್ದೆ 2013ರ ಕಲಂ 185 ಮತ್ತು 186):**

ನಮ್ಮ ಅಭಿಪ್ರಾಯದಲ್ಲಿ ಮತ್ತು ನಮಗೆ ನೀಡಿರುವ ಮಾಹಿತಿ ಮತ್ತು ವಿವರಣೆಯಂತೆ ಕಾಯ್ದೆಯ ಕಲಂ 185 ಮತ್ತು 186ರ ಉಪಬಂಧಗಳು ಅನ್ವಯವಾಗುವಂತೆ ಕಂಪನಿಯು ಯಾವುದೇ ಸಾಲವನ್ನು ಮುಂಗಡವಾಗಿ ನೀಡಿಲ್ಲ ಅಥವಾ ಯಾವುದೇ ಹೂಡಿಕೆ ಮಾಡಿಲ್ಲ ಅಥವಾ ಗ್ಯಾರಂಟಿ ಮತ್ತು ಭದ್ರತೆ ನೀಡಿಲ್ಲ. ಆದ್ದರಿಂದ ಆದೇಶದ ಕಲಂ 3(iv) ಅನ್ವಯಿಸುವುದಿಲ್ಲ.

**(v) ಠೇವಣಿಗಳು:**

ಭಾರತೀಯ ರಿಸರ್ವ್ ಬ್ಯಾಂಕ್ ಹೊರಡಿಸಿರುವ ಮಾರ್ಗದರ್ಶನ ಹಾಗೂ ಕಲಂ 73 ಮತ್ತು 76ರ ಉಪಬಂಧಗಳು ಅಥವಾ ಕಾಯ್ದೆಯ ಇತರೆ ಯಾವುದೇ ಉಪಬಂಧಗಳು ಮತ್ತು ಅದರಡಿ ರಚನೆಯಾದ ನಿಯಮಗಳು ಅನ್ವಯವಾಗುವಂತೆ ಠೇವಣಿಗಳೆಂದು ಪರಿಗಣಿಸಲಾದ ಯಾವುದೇ ಠೇವಣಿಗಳು ಮತ್ತು ಮೊತ್ತವನ್ನು ಕಂಪನಿಯು ಸ್ವೀಕರಿಸಿರುವುದಿಲ್ಲ. ಆದ್ದರಿಂದ ಆದೇಶದ ಕಲಂ 3(v) ರ ಉಪಬಂಧಗಳು ಅನ್ವಯವಾಗುವುದಿಲ್ಲ.

**(vi) ಖರ್ಚಿನ ದಾಖಲೆಗಳು (ಕಂಪನಿಗಳ ಕಾಯ್ದೆ 2013ರ ಕಲಂ 148):**

ನಮಗಿರುವ ತಿಳುವಳಿಕೆ ಮತ್ತು ನಮಗೆ ನೀಡಿರುವ ವಿವರಣೆಯಂತೆ ಕಂಪನಿಯು ಯಾವುದೇ ಸರಕು ಉತ್ಪಾದನೆಯಲ್ಲಿ ತೊಡಗಿಸಿಕೊಂಡಿಲ್ಲವಾದ್ದರಿಂದ ಕಾಯ್ದೆಯ ಕಲಂ 148ರ ಉಪಕಲಂ (1)ನ ಅನುಚ್ಛೇದ (ಡಿ) ಅಡಿ ಖರ್ಚಿನ ದಾಖಲೆಗಳನ್ನು ನಿರ್ವಹಣೆ ಮಾಡಲು ಕೇಂದ್ರ ಸರ್ಕಾರ ಆದೇಶಿಸಿದೆ. ಆದ್ದರಿಂದ ಆದೇಶದ ಪರಿಚ್ಛೇದ 3(vi) ರ ಉಪಬಂಧಗಳು ಅನ್ವಯವಾಗುವುದಿಲ್ಲ.

**(vii) ಶಾಸನಬದ್ಧ ಬಾಕಿಗಳು:**

(ಎ) ನಮಗೆ ನೀಡಿರುವ ಮಾಹಿತಿ ಮತ್ತು ವಿವರಣೆಯಂತೆ ಹಾಗೂ ಕಂಪನಿಯ ದಾಖಲೆಗಳನ್ನು ಪರಿಶೀಲಿಸಿದ ಆಧಾರದ ಮೇರೆಗೆ ಲೆಕ್ಕದ ಪುಸ್ತಕದಲ್ಲಿ ಕಡಿತ/ಸೇರ್ಪಡೆ ಮಾಡಿದ ವಿವಾದ ರಹಿತ ಶಾಸನಬದ್ಧ ಬಾಕಿಗಳಾದ ಭವಿಷ್ಯನಿಧಿ, ಇಎಸ್‌ಐ, ಆದಾಯ ತೆರಿಗೆ, ಸೀಮಾಸುಂಕ ತೆರಿಗೆ, ಅಬಕಾರಿ ತೆರಿಗೆ, ಮೌಲ್ಯವರ್ಧಿತ ತೆರಿಗೆ, ಕಿರುತೆರಿಗೆ ಹಾಗೂ ಇತರೆ ವಾಸ್ತವಿಕ ಶಾಸನಬದ್ಧ ತೆರಿಗೆಗಳನ್ನು ಕಂಪನಿಯು ಸಾಮಾನ್ಯವಾಗಿ ವ್ಯವಸ್ಥಿತವಾಗಿ ವರ್ಷದ ಅವಧಿಯಲ್ಲಿ ಸೂಕ್ತ ಪ್ರಾಧಿಕಾರಗಳಲ್ಲಿ ಠೇವಣಿ ಮಾಡಿದೆ.

ನಮಗೆ ನೀಡಿರುವ ಮಾಹಿತಿ ಮತ್ತು ವಿವರಣೆಯಂತೆ 31ನೇ ಮಾರ್ಚ್ 2022ಕ್ಕೆ ಅವುಗಳು ಪಾವತಿಸಬೇಕಾದ ದಿನಾಂಕದಿಂದ ಆರು ತಿಂಗಳು ಮೀರಿದ ಅವಧಿಗೆ ಬಾಕಿಗಳಲ್ಲಿ ಭವಿಷ್ಯನಿಧಿ, ಇಎಸ್ಐ, ಆದಾಯ ತೆರಿಗೆ, ಮಾರಾಟ ತೆರಿಗೆ, ಸೇವಾ ತೆರಿಗೆ, ಸರಕು ಮತ್ತು ಸೇವಾ ತೆರಿಗೆ, ಸೀಮಾ ಸುಂಕ ತೆರಿಗೆ, ಅಬಕಾರಿ ತೆರಿಗೆ, ಮೌಲ್ಯವರ್ಧಿತ ತೆರಿಗೆ ಹಾಗೂ ಇತರೆ ವಾಸ್ತವಿಕ ಶಾಸನಬದ್ಧ ಬಾಕಿಗಳಿಗೆ ಸಂಬಂಧಿಸಿದ ವಿವಾದರಹಿತ ಪಾವತಿಗಳೂ ಇರುವುದಿಲ್ಲ.

(ಬಿ) ಕಂಪನಿಗಳ ದಾಖಲೆಗಳ ಪ್ರಕಾರ ಮತ್ತು ನಮಗೆ ನೀಡಿರುವ ಮಾಹಿತಿ ಮತ್ತು ವಿವರಣೆಯಂತೆ ಬಡ್ಡಿ/ಕಿರು ತೆರಿಗೆ ಒಳಗೊಂಡಂತೆ ಆದಾಯ ತೆರಿಗೆ, ಜಿಎಸ್‌ಟಿ ಗೆ ಸಂಬಂಧಿಸಿದಂತೆ ಯಾವುದೇ ವಿವಾದದಿಂದ ಬಾಕಿ ಉಳಿದಿರುವ ಬಾಕಿ ಇರುವುದಿಲ್ಲ.

**(viii) ಲೆಕ್ಕದ ಪುಸ್ತಕಗಳಲ್ಲಿ ದಾಖಲಾಗದ ವಹಿವಾಟು:**

ನಮಗೆ ನೀಡಿರುವ ಮಾಹಿತಿ ಮತ್ತು ವಿವರಣೆಯಂತೆ ಮತ್ತು ಕಂಪನಿಯ ದಾಖಲೆಗಳನ್ನು ನಾವು ಪರಿಶೀಲಿಸಿದ ಸಂದರ್ಭದಲ್ಲಿ ಚಾಲ್ತಿ ವರ್ಷದಲ್ಲಿ ಆದಾಯ ತೆರಿಗೆ ಕಾಯ್ದೆ 1961ರಡಿ ಆದಾಯ ಮೌಲ್ಯಮಾಪನದ ಸಂದರ್ಭದಲ್ಲಿ ಆದಾಯವೆಂದು, ಲೆಕ್ಕದ ಪುಸ್ತಕಗಳಲ್ಲಿ ಆದಾಯವೆಂದು ಈ ಹಿಂದೆ ದಾಖಲಿಸದ ಯಾವುದೇ ವಹಿವಾಟುಗಳನ್ನು ಬಿಟ್ಟುಕೊಟ್ಟಿಲ್ಲ ಅಥವಾ ಬಹಿರಂಗಪಡಿಸಿಲ್ಲ. ಆದ್ದರಿಂದ ಆದೇಶದ ಪರಿಚ್ಛೇದ 3(viii) ರ ಉಪಬಂಧಗಳು ಅನ್ವಯವಾಗುವುದಿಲ್ಲ.

**(ix) ಸಾಲ ಅಥವಾ ಎರವು ಮರುಪಾವತಿಯಲ್ಲಿ ಹಾಲಿ ವ್ಯವಸ್ಥೆ:**

ಕಂಪನಿಯು ಹಣಕಾಸು ಸಂಸ್ಥೆಗಳು, ಬ್ಯಾಂಕುಗಳು ಅಥವಾ ಸರ್ಕಾರದಿಂದ ಯಾವುದೇ ಸಾಲ ಅಥವಾ ಎರವನ್ನು ಪಡೆದಿಲ್ಲ ಅಥವಾ ಡಿಬೆಂಚರ್ ಹೋಲ್ಡರ್‌ಗಳಿಗೆ ಬಾಕಿ ಇರುವುದಿಲ. ಆದ್ದರಿಂದ ಆದೇಶದ ಪರಿಚ್ಛೇದ 3(ix) ರ ಉಪಬಂಧಗಳು ಅನ್ವಯವಾಗುವುದಿಲ್ಲ.

**(x) ಪಬ್ಲಿಕ್ ಆಫರ್:**

ನಮಗೆ ನೀಡಿರುವ ಮಾಹಿತಿ ಮತ್ತು ವಿವರಣೆಯನ್ವಯ ನಮ್ಮ ಅಭಿಪ್ರಾಯದಲ್ಲಿ ಕಂಪನಿಯು ಆರಂಭಿಕ ಸಾರ್ವಜನಿಕ ನೀಡಿಕೆ ಅಥವಾ ಮುಂದುವರಿದ ಸಾರ್ವಜನಿಕ ನೀಡಿಕೆ ರೂಪದಲ್ಲಿ ಯಾವುದೇ ಹಣವನ್ನು ಸಂಗ್ರಹಣೆ ಮಾಡಿಲ್ಲ (ಅವಧಿಸಾಲ ಮತ್ತು ಋಣಸಾಧನೆ). ಆದ್ದರಿಂದ ಆದೇಶದ ಪರಿಚ್ಛೇದ 3(ix) ರ ಉಪಬಂಧಗಳು ಅನ್ವಯವಾಗುವುದಿಲ್ಲ.

**(xi) ಕಂಪನಿ ಅಥವಾ ಅದರ ಅಧಿಕಾರಿಗಳು ಮತ್ತು ನೌಕರರಿಂದ ವಂಚನೆ:**

ನಮಗೆ ನೀಡಿರುವ ಮಾಹಿತಿ ಮತ್ತು ವಿವರಣೆಯಂತೆ ಹಾಗೂ ಸಾಮಾನ್ಯವಾಗಿ ಒಪ್ಪಿಕೊಂಡಿರುವ ಲೆಕ್ಕನೀತಿ ಪ್ರಕ್ರಿಯೆಗಳಿಗೆ ಅನುಸಾರವಾಗಿ ನಡೆಸಿದ ಪರೀಕ್ಷೆಗಳನ್ನು ತಾಳೆ ನೋಡಿದ ಆಧಾರದಲ್ಲಿ ವರ್ಷದ ಅವಧಿಯಲ್ಲಿ ಯಾವುದೇ ವಂಚನೆ ಎಸಗಿರುವುದು ಕಂಡು ಬಂದಿಲ್ಲ ಅಥವಾ ಅದರ ಅಧಿಕಾರಿಗಳು ಮತ್ತು ನೌಕರರು ವಂಚನೆ ಎಸಗಿರುವುದು ಗಮನಕ್ಕೆ ಬಂದಿಲ್ಲ ಅಥವಾ ವರದಿಯಾಗಿಲ್ಲ. ಅದರಂತೆ ಆದೇಶದ ಪರಿಚ್ಛೇದ 3(xi) ರ ಉಪಬಂಧಗಳು ಅನ್ವಯವಾಗುವುದಿಲ್ಲ.

**(xii) ನಿಧಿ ಕಂಪನಿ:**

ಕಂಪನಿಯು ನಿಧಿ ಕಂಪನಿ ಅಲ್ಲ. ಅದರಂತೆ ಆದೇಶದ ಪರಿಚ್ಛೇದ 3(xii) ರ ಉಪಬಂಧಗಳು ಅನ್ವಯವಾಗುವುದಿಲ್ಲ.

**(xiii) ಸಂಬಂಧಪಟ್ಟ ಸಂಸ್ಥೆಗಳ ವಹಿವಾಟುಗಳು:**

ನಮಗೆ ನೀಡಿರುವ ಮಾಹಿತಿ ಮತ್ತು ವಿವರಣೆಯಂತೆ ಹಾಗೂ ಆಡಳಿತ ಮಂಡಳಿಯು ನಮಗೆ ನಿವೇದಿಸಿದಂತೆ ಸಂಬಂಧಪಟ್ಟ ಸಂಸ್ಥೆಗಳ ಜೊತೆಗಿನ ಎಲ್ಲಾ ವ್ಯವಹಾರಗಳು ಕಾಯ್ದೆಯ ಕಲಂ 177 ಮತ್ತು 188ಕ್ಕೆ ಅನುಗುಣವಾಗಿದೆ ಮತ್ತು ಅದರ ವಿವರಗಳನ್ನು ಅನ್ವಯಿಸುವ ಲೆಕ್ಕನೀತಿಗಳ ಮಾನದಂಡಗಳಿಗೆ ಅನುಗುಣವಾಗಿ ಹಣಕಾಸು ಹೇಳಿಕೆಗಳಲ್ಲಿ ಬಹಿರಂಗಪಡಿಸಲಾಗಿದೆ.

**(xiv) ಕಂಪನಿಗಳ ಕಾಯ್ದೆ 2013ರ ಕಲಂ 138ರಡಿ ಆಂತರಿಕ ಲೆಕ್ಕಪರಿಶೋಧನೆ:**

ಕಂಪನಿಗಳ ಕಾಯ್ದೆ 2013ರ ಕಲಂ 138ರಡಿ ಆಂತರಿಕ ಲೆಕ್ಕಪರಿಶೋಧನೆಯು ಕಂಪನಿಗೆ ಅನ್ವಯಿಸುವುದಿಲ್ಲ. ಅದರಂತೆ ಆದೇಶದ ಪರಿಚ್ಛೇದ 3(xiv) ರ ಉಪಬಂಧಗಳು ಅನ್ವಯವಾಗುವುದಿಲ್ಲ.

**(xv) ನಗದೇತರ ವಹಿವಾಟುಗಳು:**

ಆಡಳಿತ ಮಂಡಳಿಯು ನಮಗೆ ನಿವೇದಿಸಿದಂತೆ ಹಾಗೂ ನಮಗೆ ನೀಡಿರುವ ಮಾಹಿತಿ ಮತ್ತು ವಿವರಣೆಯಂತೆ ನಿರ್ದೇಶಕರು ಮತ್ತು ಅವರಿಗೆ ಸಂಬಂಧಪಟ್ಟ ವ್ಯಕ್ತಿಗಳ ಜೊತೆಗೆ ಯಾವುದೇ ನಗದೇತರ ವಹಿವಾಟುಗಳನ್ನು ಕಂಪನಿಯು ನಡೆಸಿಲ್ಲ. ಅದರಂತೆ ಆದೇಶದ ಪರಿಚ್ಛೇದ 3(xv) ರ ಉಪಬಂಧಗಳು ಅನ್ವಯವಾಗುವುದಿಲ್ಲ.

**(xvi) ಭಾರತೀಯ ರಿಸರ್ವ್ ಬ್ಯಾಂಕ್ ಕಾಯ್ದೆ 1934ರ ಕಲಂ 45-IA ರಡಿ ನೋಂದಣಿ:**

ನಮಗೆ ನೀಡಿರುವ ಮಾಹಿತಿ ಮತ್ತು ವಿವರಣೆಯಂತೆ, ಕಂಪನಿಯು ಭಾರತೀಯ ರಿಸರ್ವ್ ಬ್ಯಾಂಕ್ ಕಾಯ್ದೆ 1934ರ ಕಲಂ 45-IA ನೋಂದಣಿ ಮಾಡಿಕೊಳ್ಳುವ ಅಗತ್ಯವಿಲ್ಲ. ಅದರಂತೆ ಆದೇಶದ ಪರಿಚ್ಛೇದ 3(xvi) ರ ಉಪಬಂಧಗಳು ಅನ್ವಯವಾಗುವುದಿಲ್ಲ.

**(xvii) ನಗದು ನಷ್ಟ:**

2021–22ನೇ ವರ್ಷದಲ್ಲಿ ಕಂಪನಿಯು ನಗದು ರೂಪದಲ್ಲಿ ಯಾವುದೇ ನಷ್ಟವನ್ನು ಹೊಂದಿಲ್ಲ. ಆದರೆ ಕಂಪನಿಯು 2020–21ನೇ ವರ್ಷದ ಅವಧಿಯಲ್ಲಿ ರೂ. 17.2 ಲಕ್ಷಗಳು ನಗದು ನಷ್ಟಕ್ಕೆ ಗುರಿಯಾಗಿದೆ.

**(xviii) ಶಾಸನಬದ್ಧ ಲೆಕ್ಕಪರಿಶೋಧಕರ ರಾಜೀನಾಮೆ:**

2021–22ನೇ ವರ್ಷದ ಅವಧಿಯಲ್ಲಿ ಶಾಸನಬದ್ಧ ಲೆಕ್ಕಪರಿಶೋಧಕರು ರಾಜೀನಾಮೆ ನೀಡಿಲ್ಲ. ಭಾರತದ ನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರಿಂದ ಲೆಕ್ಕಪರಿಶೋಧಕರು ನೇಮಕಗೊಳ್ಳುವರು. ಅದರಂತೆ ಆದೇಶದ ಪರಿಚ್ಛೇದ 3(xviii) ರ ಉಪಬಂಧಗಳು ಅನ್ವಯವಾಗುವುದಿಲ್ಲ.

**(xix) ಹೊಣೆಗಾರಿಕೆಗಳನ್ನು ಎದುರಿಸುವಲ್ಲಿ ವಾಸ್ತವಿಕ ಅನಿಶ್ಚಿತತೆ:**

ನಮಗೆ ನೀಡಿರುವ ಮಾಹಿತಿ ಮತ್ತು ವಿವರಣೆಯಂತೆ ಹಾಗೂ ಹಣಕಾಸಿನ ಆಸ್ತಿ ಮತ್ತು ಹೊಣೆಗಾರಿಕೆಗಳನ್ನು ಅರಿತುಕೊಳ್ಳಲು ನಿರೀಕ್ಷೆಯ ದಿನಾಂಕ ಮತ್ತು ಕಾಲಾವಧಿ, ಹಣಕಾಸಿನ ಶೇಕಡಾವಾರು ಆಧಾರದಲ್ಲಿ ಸ್ವತಂತ್ರ ಹಣಕಾಸು ಹೇಳಿಕೆಗಳ ಜೊತೆಗಿನ ಇತರೆ ಮಾಹಿತಿ, ನಿರ್ದೇಶಕರ ಮಂಡಳಿಯ ಕುರಿತಂತೆ ನಮಗಿರುವ ತಿಳಿವಳಿಕೆ ಮತ್ತು ಆಡಳಿತ ಮಂಡಳಿಯ ಯೋಜನೆಗಳು ಮತ್ತು ಊಹೆಗಳನ್ನು ಬೆಂಬಲಿಸುವ ಸಾಕ್ಷ್ಯಾಧಾರಗಳನ್ನು ವಿಚಾರಣೆಗೊಳಪಡಿಸಿದ ಆಧಾರದಲ್ಲಿ, ಆರ್ಥಿಕ ವಿವರಣಾ ಪಟ್ಟಿಯ ದಿನಾಂಕದಿಂದ ಒಂದು ವರ್ಷದ ಅವಧಿಯೊಳಗೆ ಅವುಗಳು ಬಾಕಿ ಉಳಿದಾಗ ಮತ್ತು ಆರ್ಥಿಕ ವಿವರಪಟ್ಟಿ ದಿನಾಂಕಕ್ಕೆ ಇರುವ ಹೊಣೆಗಾರಿಕೆಗಳನ್ನು ನಿಭಾಯಿಸುವಲ್ಲಿ ಕಂಪನಿ ವಿಫಲವಾಗಿದೆ ಎಂದು ವಾರ್ಷಿಕ ವರದಿಯ ದಿನಾಂಕಕ್ಕೆ ಯಾವುದೇ ವಾಸ್ತವಿಕ ಅನಿಶ್ಚಿತತೆ ಉಂಟಾಗಿದೆ ಎಂದು ನಮಗೆ ನಂಬಿಕೆ ಇರುವಂತಹದ್ದು ಯಾವುದೂ ನಮ್ಮ ಗಮನಕ್ಕೆ ಬಂದಿರುವುದಿಲ್ಲ. ಆದರೂ ಕಂಪನಿಯ ಕಾರ್ಯಸಾಧ್ಯತೆ ಕುರಿತಂತೆ ನೀಡುವ ಭರವಸೆ ಅಲ್ಲ ಎಂದು ಹೇಳಲು ನಾವು ಬಯಸುವೆವು. ಮುಂದುವರೆದು ನಮ್ಮ ವರದಿಗಾರಿಕೆಯು ಲೆಕ್ಕಪರಿಶೋಧನಾ ವರದಿಯ ದಿನಾಂಕದವರೆಗಿನ ಸತ್ಯಾಂಶಗಳ ಆಧಾರದಲ್ಲಿದೆ ಹಾಗೂ ಆರ್ಥಿಕ ವಿವರ ಪಟ್ಟಿಯ ದಿನಾಂಕದಿಂದ ಒಂದು ವರ್ಷ ಅವಧಿಯೊಳಗಿನ ಹೊಣೆಗಾರಿಕೆಗಳ ಬಾಕಿಗಳು ಅವುಗಳು ಬಾಕಿ ಉಳಿದಾಗ ಕಂಪನಿಯಿಂದ ಖುಲಾಸೆ ಆಗಲಿದೆ ಎಂದು ನಾವು ಭರವಸೆ ನೀಡುವುದಿಲ್ಲ ಅಥವಾ ಯಾವುದೇ ಗ್ಯಾರೆಂಟಿ ನೀಡುವುದಿಲ್ಲ.

**(xx) ಸಿಎಸ್‌ಆರ್ ನಿಧಿಗೆ ಮೊತ್ತದ ವರ್ಗಾವಣೆ:**

ಕಂಪನಿಯು ವರ್ಷದ ಅವಧಿಯಲ್ಲಿ ಮುಂದುವರೆಯುತ್ತಿರುವ ಯೋಜನೆಗಳು ಮತ್ತು ವಿಶೇಷ ಖಾತೆ (ಸಿಎಸ್‌ಆರ್ ನಿಧಿ) ಗಳಿಗೆ ಹೊರತುಪಡಿಸಿ ಯಾವುದೇ ಖರ್ಚು ಮಾಡದ ಮೊತ್ತವನ್ನು ವರ್ಗಾವಣೆ ಮಾಡಿಲ್ಲ. ಅದರಂತೆ ಆದೇಶದ ಪರಿಚ್ಛೇದ 3(xx) ರ ಉಪಬಂಧಗಳು ಅನ್ವಯವಾಗುವುದಿಲ್ಲ.

**(xxi) ಕಂಪನಿಯ CARO ವರದಿಯಲ್ಲಿ ಆಯಾ ಲೆಕ್ಕಪರಿಶೋಧಕರ ಅಭಿಪ್ರಾಯಗಳಿದ್ದು ಕ್ರೋಢೀಕೃತ ಹಣಕಾಸು ಹೇಳಿಕೆಗಳಲ್ಲಿ ಸೇರಿಸಲಾಗಿದೆ:**

ಕಂಪನಿಯು ಯಾವುದೇ ಅಂಗಸಂಸ್ಥೆಗಳನ್ನು ಹೊಂದಿಲ್ಲ ಹಾಗೂ ಯಾವುದೇ ಕ್ರೋಢೀಕೃತ ಹಣಕಾಸು ಹೇಳಿಕೆಗಳನ್ನು ತಯಾಸಿರುವ ಅಗತ್ಯವಿಲ್ಲ. ಅದರಂತೆ ಆದೇಶದ ಪರಿಚ್ಛೇದ 3(xxi) ರ ಉಪಬಂಧಗಳು ಅನ್ವಯವಾಗುವುದಿಲ್ಲ.

**ಅಣ್ಣಾರಾವ್ & ಶ್ರೀಕಂಠ ಪರವಾಗಿ**
**ಚಾರ್ಟರ್ಡ್ ಅಕೌಂಟೆಂಟ್ಸ್**
**ಎಫ್‌ಆರ್‌ಎನ್ : 009255S**
**ಸಹಿ/-**
**ಸಿಎ ಶ್ರೀಕಂಠ ಜಿ. ಕುಲಕರ್ಣಿ**
**ಪಾಲುದಾರರು**
**ಸದಸ್ಯತ್ವ ಸಂ. 027422**
**ಯುಡಿಐಎನ್: 22027422ANKWDE9724**

ಸ್ಥಳ : ಬೆಂಗಳೂರು
ದಿನಾಂಕ : 16.07.2022

# ಸ್ವತಂತ್ರ ಲೆಕ್ಕಪರಿಶೋಧಕರ ವರದಿಗೆ ಅನುಬಂಧ "ಬಿ"

**(ಸಮದಿನಾಂಕದಂದು ಇದ್ದಂತೆ ಬೆಂಗಳೂರು ವಿಮಾನ ನಿಲ್ದಾಣ ರೈಲು ಸಂಪರ್ಕ ನಿಯಮಿತದ ಸದಸ್ಯರಿಗೆ ''ಇತರೆ ಕಾನೂನಾತ್ಮಕ ಮತ್ತು ನಿಯಂತ್ರಣ ಅಗತ್ಯತೆಗಳು'' ಕಲಂ ರಡಿ ಪ್ಯಾರಾಗ್ರಾಫ್ 2(ಎಫ್)ರಲ್ಲಿ ಉಲ್ಲೇಖಿಸಲಾಗಿದೆ)**

**ಕಂಪನಿಗಳ ಕಾಯ್ದೆ, 2013ರ ("ಕಾಯ್ದೆ") ವಿಧಿ 143ರ ಉಪ ವಿಧಿ 3ರ ಕಲಂ(i)ರ ಅನ್ವಯ ಆಂತರಿಕ ಹಣಕಾಸಿನ ನಿಯಂತ್ರಣಗಳ ಮೇಲಿನ ವರದಿ**

ಇದೇ ದಿನಾಂಕಕ್ಕೆ ಕೊನೆಗೊಂಡ ಕಂಪನಿಯ ವರ್ಷದ ಹಣಕಾಸಿನ ಹೇಳಿಕೆಗಳ ಬಗೆಗಿನ ನಮ್ಮ ಲೆಕ್ಕಪರಿಶೋಧನೆ ಜೊತೆಗೆ 31ನೇ ಮಾರ್ಚ್ 2022ರಂದು ಇದ್ದಂತೆ ಮೆ|| ಬೆಂಗಳೂರು ವಿಮಾನ ನಿಲ್ದಾಣ ರೈಲು ಸಂಪರ್ಕ ನಿಯಮಿತದ ಹಣಕಾಸಿನ ವರದಿಯ ಬಗೆಗಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ಲೆಕ್ಕಪರಿಶೋಧನೆಯನ್ನು ನಾವು ಮಾಡಿದ್ದೇವೆ.

**ಅಭಿಪ್ರಾಯವನ್ನು ಅಲ್ಲಗೆಳೆದಿರುವುದು:**

"ಅಭಿಪ್ರಾಯವನ್ನು ಅಲ್ಲಗೆಳೆದಿರುವುದಕ್ಕೆ ಆಧಾರ " ವೆಂಬ ಪ್ಯಾರಾದಲ್ಲಿ ನೀಡಿರುವ ಕಾರಣಗಳಿಂದಾಗಿ ಕಂಪನಿಯ ಆಂತರಿಕ ಹಣಕಾಸಿನ ನಿಯಂತ್ರಣ ವ್ಯವಸ್ಥೆ ಕುರಿತಾದ ಹಣಕಾಸಿನ ವರದಿಗೆ ಸಂಬಂಧಿಸಿದ ಲೆಕ್ಕ ಪರಿಶೋಧನಾ ಅಭಿಪ್ರಾಯ ನೀಡಲು 31ನೇ ಮಾರ್ಚ್ 2022ಕ್ಕೆ ಆಂತರಿಕ ಹಣಕಾಸು ನಿಯಂತ್ರಣಗಳು ಪರಿಣಾಮಕಾರಿಯಾಗಿ ಕಾರ್ಯಾಚರಣೆಗೊಳ್ಳುತ್ತಿವೆ ಎನ್ನಲು ಯಾವುದೇ ಸಾಕ್ಷ್ಯಾಧಾರಗಳು ನಮಗೆ ದೊರೆತಿಲ್ಲ.

**ಅಭಿಪ್ರಾಯವನ್ನು ಅಲ್ಲಗೆಳೆದಿರುವುದಕ್ಕೆ ಆಧಾರ:**

ನಮಗೆ ನೀಡಿರುವ ಮಾಹಿತಿ ಮತ್ತು ವಿವರಣೆಯಂತೆ ಐಸಿಎಐ ಹೊರಡಿಸಿರುವ ಮಾರ್ಗಸೂಚಿ ಟಿಪ್ಪಣಿಯಲ್ಲಿರುವಂತೆ ಆಂತರಿಕ ನಿಯಂತ್ರಣಕ್ಕೆ ಸಂಬಂಧಿಸಿದ ಅಗತ್ಯ ಅಂಶಗಳನ್ನು ಪರಿಗಣಿಸುವುದಾಗಲಿ ಅಥವಾ ಮಾನದಂಡಗಳ ಆಧಾರದಲ್ಲಿ ಹಣಕಾಸು ವರದಿಯ ಮೇಲೆ ತನ್ನ ಆಂತರಿಕ ಹಣಕಾಸು ನಿಯಂತ್ರಣವನ್ನು ಕಂಪನಿ ಅಧಿಷ್ಠಾಪಿಸಿಲ್ಲ.

ಹಣಕಾಸಿನ ಹೇಳಿಕೆಗಳ ಕುರಿತಾದ ನಮ್ಮ ಲೆಕ್ಕ ಪರಿಶೋಧನಾ ವರದಿಯ ಸ್ವರೂಪ, ಅವಧಿ ಮತ್ತು ಲೆಕ್ಕ ಪರಿಶೋಧನೆಯನ್ನು ಓರೆ ಹಚ್ಚಲು ಮೇಲ್ಕಂಡ ವರದಿಗೆ ಹಕ್ಕು ಬಾಧ್ಯತೆ ಇಲ್ಲ ಎನ್ನುವುದು ಪರಿಗಣಿಸಲಾಗಿದೆ ಹಾಗೂ ಈ ಹೇಳಿಕೆಯು ಕಂಪನಿಯ ಹಣಕಾಸಿನ ಹೇಳಿಕೆಗಳ ಮೇಲೆ ಯಾವುದೇ ಪ್ರಭಾವ ಬೀರುವುದಿಲ್ಲ ಎಂಬ ನಮ್ಮ ಅಭಿಪ್ರಾಯವನ್ನು ಬದಲಾಯಿಸುವುದಿಲ್ಲ.

**ಆಂತರಿಕ ಹಣಕಾಸಿನ ನಿಯಂತ್ರಣಗಳ ವಿಚಾರವಾಗಿ ಆಡಳಿತ ವರ್ಗಕ್ಕಿರುವ ಜವಾಬ್ದಾರಿ**

"ಭಾರತದ ಲೆಕ್ಕಪರಿಶೋಧಕರ ಸಂಸ್ಥೆ (ಐಸಿಎಐ) ನೀಡಿರುವ ಹಣಕಾಸಿನ ವರದಿಗಾರಿಕೆ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ಲೆಕ್ಕ ಪರಿಶೋಧನೆಯ ಮಾರ್ಗದರ್ಶಿ ಟಿಪ್ಪಣಿಯಲ್ಲಿ ತಿಳಿಸಿರುವ ಆಂತರಿಕ ನಿಯಂತ್ರಣಗಳ ಅಗತ್ಯ ಅಂಶಗಳನ್ನು ಪರಿಗಣಿಸಿ ಕಂಪನಿಯು ರೂಪಿಸಿರುವ ಹಣಕಾಸಿನ ವರದಿಗಾರಿಕೆ ಮಾನದಂಡಗಳ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳನ್ನು ರೂಪಿಸುವುದು ಮತ್ತು ನಿರ್ವಹಣೆ ಮಾಡುವುದು ಕಂಪನಿಯ ಆಡಳಿತ ಮಂಡಳಿಯ ಜವಾಬ್ದಾರಿಯಾಗಿರುವುದು". ಕಂಪನಿಗಳ ಕಾಯಿದೆ, 2013ರ ಅನ್ವಯ ಅಗತ್ಯವಾದಂತೆ ಕಂಪನಿಯ ನೀತಿಗಳ ಅನುಸರಣೆ, ಕಂಪನಿಯ ಸ್ವತ್ತುಗಳ ರಕ್ಷಣೆ, ವಂಚನೆ ಮತ್ತು ತಪ್ಪುಗಳ ತಡೆ ಮತ್ತು ಪತ್ತೆ ಹಚ್ಚುವಿಕೆ, ಲೆಕ್ಕಪತ್ರದ ದಾಖಲೆಗಳ ನಿಖರತೆ ಮತ್ತು ಪರಿಪೂರ್ಣತೆ ಮತ್ತು ವಿಶ್ವಾಸಾರ್ಹವಾದ ಹಣಕಾಸಿನ ಮಾಹಿತಿಯನ್ನು ಸಕಾಲಿಕವಾಗಿ ಸಿದ್ಧಪಡಿಸುವಿಕೆ ಒಳಗೊಂಡಂತೆ ಕಂಪನಿಯ ವ್ಯವಹಾರವನ್ನು ಸರಿಯಾದ ಕ್ರಮದಲ್ಲಿ ಮತ್ತು ಸಮರ್ಥವಾಗಿ ನಡೆಸಲು ಅನುವಾಗಿಸಲು ಪರಿಣಾಮಕಾರಿಯಾಗಿ ಕಾರ್ಯಾಚರಣೆಗೊಳ್ಳುವ ಸಾಕಷ್ಟು ಪ್ರಮಾಣದ ಆಂತರಿಕ ಹಣಕಾಸು ನಿಯಂತ್ರಣಗಳ ವಿನ್ಯಾಸಪಡಿಸುವಿಕೆ, ಅನುಷ್ಠಾನ ಮತ್ತು ನಿರ್ವಹಣೆ ಮಾಡುವುದು ಸೇರಿದಂತೆ ಜವಾಬ್ದಾರಿಗಳು ಇದರಲ್ಲಿ ಒಳಗೊಂಡಿರುವುದು.

**ಆಂತರಿಕ ಹಣಕಾಸು ನಿಯಂತ್ರಣಗಳಿಗೆ ಲೆಕ್ಕಪರಿಶೋಧಕರ ಜವಾಬ್ದಾರಿ**

ನಮ್ಮ ಲೆಕ್ಕ ಪರಿಶೋಧನೆಯ ಆಧಾರದ ಮೇಲೆ ಹಣಕಾಸಿನ ವರದಿಗಾರಿಕೆ ಮೇಲಿನ ಕಂಪನಿಯ ಆಂತರಿಕ ಹಣಕಾಸಿನ ನಿಯಂತ್ರಣಗಳ ವಿಚಾರವಾಗಿ ಅಭಿಪ್ರಾಯ ಒಂದನ್ನು ತಿಳಿಸುವುದು ನಮ್ಮ ಜವಾಬ್ದಾರಿಯಾಗಿರುವುದು. ಹಣಕಾಸಿನ ವರದಿಗಾರಿಕೆ ಮೇಲಿನ ಆಂತರಿಕ ಹಣಕಾಸು ನಿಯಂತ್ರಣಗಳಿಗೆ ಸಂಬಂಧಿಸಿದ ಮಾರ್ಗದರ್ಶಿ ಟಿಪ್ಪಣಿ ಮತ್ತು ಕಂಪನಿಗಳ ಕಾಯ್ದೆ, 2013ರ ವಿಧಿ 143(10)ರ ಅನ್ವಯ ನಿಗದಿಪಡಿಸಲಾದುದು ಎಂದು ಭಾವಿಸುವ ಮತ್ತು ಐಸಿಎಐ ಇವರು ನೀಡಿದ ಲೆಕ್ಕಪರಿಶೋಧನೆಯ ಗುಣಮಟ್ಟಗಳನ್ನು ಆಂತರಿಕ ಹಣಕಾಸು ನಿಯಂತ್ರಣಗಳ ಲೆಕ್ಕಪರಿಶೋಧನೆಗೆ ಅನ್ವಯವಾಗುವ ಮಟ್ಟಕ್ಕೆ ನಾವು, ನಮ್ಮ ಲೆಕ್ಕಪರಿಶೋಧನೆ ಕಾರ್ಯ ನಡೆಸಿದ್ದೇವೆ. ಈ ಎರಡೂ ಮಾನದಂಡಗಳನ್ನು ಭಾರತೀಯ ಲೆಕ್ಕಪರಿಶೋಧಕರ ಸಂಸ್ಥೆ ಹೊರಡಿಸಿದ್ದು ಇವೆರಡೂ ಆಂತರಿಕ ಹಣಕಾಸು ನಿಯಂತ್ರಣಗಳ ಪರಿಶೋಧನೆಗೆ ಅನ್ವಯವಾಗುವವು. ಈ ಮಾನದಂಡಗಳು ಮತ್ತು ಮಾರ್ಗದರ್ಶಿ ಟಿಪ್ಪಣಿಗಳ ಅನ್ವಯ, ಹಣಕಾಸಿನ ವರದಿಗಾರಿಕೆ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳು ಸಾಕಷ್ಟು ಪ್ರಮಾಣದಲ್ಲಿರುವುದೇ ಎಂಬ ವಿಚಾರವಾಗಿ ಸೂಕ್ತವಾದ ಭರವಸೆ ಪಡೆದುಕೊಳ್ಳಲು

ನೈತಿಕ ಅಗತ್ಯತೆಗಳನ್ನು ನಾವು ಪಾಲಿಸಬೇಕು ಮತ್ತು ಯೋಜಿಸಬೇಕು ಹಾಗೂ ಪರಿಶೋಧನೆ ನಡೆಸಬೇಕು ಮತ್ತು ಹಣಕಾಸಿನ ವರದಿಗಾರಿಕೆ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳು ಸಾಕಷ್ಟಿರುವುದೇ ಮತ್ತು ನಿರ್ವಹಣೆ ಮಾಡಲಾಗಿದೆಯೇ ಹಾಗೂ ಸದರಿ ನಿಯಂತ್ರಣಗಳು ಎಲ್ಲಾ ವಾಸ್ತವಿಕ ವಿಚಾರಗಳ ಸಂಬಂಧ ಪರಿಣಾಮಕಾರಿಯಾಗಿ ಕಾರ್ಯಾಚರಣೆಗೊಂಡಿವೆಯೇ ಎಂಬುದರ ಬಗ್ಗೆ ಸೂಕ್ತವಾದ ಭರವಸೆ ಪಡೆಯಲು ಇದನ್ನು ನಾವು ಅನುಸರಿಸಬೇಕು.

ಈ ಮೇಲ್ಕಂಡ ಪ್ಯಾರಾದಲ್ಲಿ ''ಅಭಿಪ್ರಾಯಗಳನ್ನು ಅಲ್ಲಗಳೆದಿರುವುದರ ಆಧಾರದ ಮೇರೆಗೆ'' ಕಂಪನಿಯ ಆಂತರಿಕ ಹಣಕಾಸಿನ ನಿಯಂತ್ರಣ ವ್ಯವಸ್ಥೆ ಕುರಿತಾದ ಹಣಕಾಸಿನ ವರದಿಯ ಬಗ್ಗೆ ಲೆಕ್ಕಪರಿಶೋಧನಾ ಅಭಿಪ್ರಾಯ ನೀಡಲು ನಮಗೆ ಯಾವುದೇ ಸೂಕ್ತ ಲೆಕ್ಕಪರಿಶೋಧನಾ ಸಾಕ್ಷ್ಯಾಧಾರಗಳು ದೊರೆತಿಲ್ಲ.

**ಹಣಕಾಸಿನ ವರದಿಗಾರಿಕೆ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ಅರ್ಥ**

ಹಣಕಾಸಿನ ವರದಿಗಾರಿಕೆಯ ಮೇಲಿನ ಕಂಪನಿ ಒಂದರ ಆಂತರಿಕ ಹಣಕಾಸಿನ ನಿಯಂತ್ರಣವು ಸಾಮಾನ್ಯವಾಗಿ ಅಂಗೀಕರಿಸಲ್ಪಟ್ಟಿರುವ ಲೆಕ್ಕಗಾರಿಕೆಯ ನೀತಿಗಳ ಅನುಸಾರ ಹೊರಗಿನ ಉದ್ದೇಶಕ್ಕಾಗಿ ಹಣಕಾಸಿನ ಹೇಳಿಕೆಗಳನ್ನು ಸಿದ್ಧಪಡಿಸುವುದು ಮತ್ತು ಹಣಕಾಸಿನ ವರದಿಗಾರಿಕೆಯ ವಿಶ್ವಾಸಾರ್ಹತೆ ಬಗ್ಗೆ ಸೂಕ್ತವಾದ ಆಶ್ವಾಸನೆ ಒದಗಿಸುವುದಕ್ಕಾಗಿ ರೂಪಿಸಿರುವ ಒಂದು ಪ್ರಕ್ರಿಯೆಯಾಗಿದೆ. ಕಂಪನಿಯ ಹಣಕಾಸಿನ ವರದಿಗಾರಿಕೆ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣದಲ್ಲಿ (1) ಸೂಕ್ತವಾದ ವಿವರಗಳು, ವ್ಯವಹಾರವನ್ನು ನಿಖರವಾಗಿ ಮತ್ತು ನ್ಯಾಯೋಚಿತವಾಗಿ ಪ್ರತಿಫಲಿಸುವ ಮತ್ತು ಕಂಪನಿಯ ಸ್ವತ್ತುಗಳನ್ನು ಅಣಿಗೊಳಿಸುವ ದಾಖಲೆ ಪತ್ರಗಳ ನಿರ್ವಹಣೆಗೆ ಸಂಬಂಧಿಸಿದಂತೆ ಅನುಸರಿಸುವ ನೀತಿಗಳು ಮತ್ತು ಕ್ರಮಾವಳಿಗಳು (2) ಸಾಮಾನ್ಯವಾಗಿ ಅಂಗೀಕರಿಸಿರುವ ಲೆಕ್ಕಗಾರಿಕೆ ನೀತಿಗಳ ಅನುಸಾರ ಹಣಕಾಸಿನ ಹೇಳಿಕೆಗಳನ್ನು ಸಿದ್ಧಪಡಿಸಲು ಅನುಮತಿ ನೀಡಲು ಅಗತ್ಯವಾಗಿರುವ ವ್ಯವಹಾರಗಳನ್ನು ದಾಖಲು ಮಾಡಲಾಗಿದೆ ಮತ್ತು ಕಂಪನಿಯ ಸಂದಾಯಗಳು ಹಾಗೂ ಖರ್ಚುಗಳನ್ನು ಆಡಳಿತ ಮಂಡಳಿ ಮತ್ತು ಕಂಪನಿಯ ನಿರ್ದೇಶಕರು ನೀಡಿರುವ ಅಧಿಕಾರಗಳ ಅನ್ವಯ ಮಾಡಲಾಗಿದೆ ಎಂಬುದಕ್ಕೆ ಸೂಕ್ತವಾದ ಆಶ್ವಾಸನೆ ನೀಡುವುದು; ಮತ್ತು (3) ಹಣಕಾಸಿನ ಹೇಳಿಕೆಗಳ ಮೇಲೆ ವಾಸ್ತವಿಕ ಪರಿಣಾಮ ಬೀರುವ ಕಂಪನಿಯ ಸ್ವತ್ತುಗಳ ಅನಧಿಕೃತ ಸ್ವಾಧೀನತೆ, ಬಳಕೆ ಅಥವಾ ಅಣಿಗೊಳಿಸುವಿಕೆಯನ್ನು ತಡೆಯುವುದು ಅಥವಾ ಸಕಾಲಿಕವಾಗಿ ಪತ್ತೆ ಹಚ್ಚುವಿಕೆ ವಿಚಾರವಾಗಿ ಸೂಕ್ತವಾದ ಆಶ್ವಾಸನೆ ಒದಗಿಸುವುದು ಒಳಗೊಂಡಿರುವುದು.

**ಹಣಕಾಸಿನ ವರದಿಗಾರಿಕೆ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ಅಂತರ್ಗತ ಮಿತಿಗಳು**

ಹಣಕಾಸಿನ ವರದಿಯ ಮೇಲಿನ ಆಂತರಿಕ ಹಣಕಾಸು ನಿಯಂತ್ರಣಗಳೂ ಸೇರಿದಂತೆ ಸಂಯೋಜನೆ ಅಥವಾ ನಿಯಂತ್ರಣ ಮೀರಿ ಅನುಚಿತ ನಿರ್ವಹಣೆ ಸಾಧ್ಯತೆಯಿಂದಾಗಿ ತಪ್ಪಿನಿಂದ ಅಥವಾ ವಂಚನೆಯಿಂದಾಗುವ ವಾಸ್ತವಿಕ ತಪ್ಪು ಹೇಳಿಕೆಗಳು ಉಂಟಾಗಬಹುದು ಮತ್ತು ಅವುಗಳನ್ನು ಪತ್ತೆ ಮಾಡಲು ಸಾಧ್ಯವಾಗದಿರಬಹುದು. ಇದಲ್ಲದೆ, ಮುಂದಿನ ಅವಧಿಗೆ ಹಣಕಾಸು ಹೇಳಿಕೆಗಳ ಮೇಲಿನ ಆಂತರಿಕ ಹಣಕಾಸು ನಿಯಂತ್ರಣಗಳ ಯಾವುದೇ ಮೌಲ್ಯ ನಿರ್ಧಾರಗಳ ಮುನ್ನಂದಾಜು, ಪರಿಸ್ಥಿತಿಯಲ್ಲಿನ ಬದಲಾವಣೆ ಅಥವಾ ನೀತಿಯ ಅನುಸರಣೆಯ ಅಥವಾ ಕಾರ್ಯ ವಿಧಾನಗಳ ಮಟ್ಟ ಕೆಡುವ ಸಾಧ್ಯತೆ ಇರುವುದರಿಂದ ಹಣಕಾಸು ನಿಯಂತ್ರಣಗಳ ಮೇಲಿನ ಆಂತರಿಕ ಹಣಕಾಸು ನಿಯಂತ್ರಣಗಳು ಅಸಮರ್ಪಕಗೊಂಡು ಅಪಾಯಕ್ಕೆ ಒಳಪಡಬಹುದಾಗಿದೆ.

**ಅಣ್ಣಾರಾವ್ & ಶ್ರೀಕಂಠ ಪರವಾಗಿ**
**ಚಾರ್ಟರ್ಡ್ ಅಕೌಂಟೆಂಟ್ಸ್**
**ಎಫ್‌ಆರ್‌ಎನ್ : 009255S**
**ಸಹಿ/-**
**ಸಿಎ ಶ್ರೀಕಂಠ ಜಿ. ಕುಲಕರ್ಣಿ**
**ಪಾಲುದಾರರು**
**ಸದಸ್ಯತ್ವ ಸಂ. 027422**
**ಯುಡಿಐಎನ್: 22027422ANKWDE9724**

ಸ್ಥಳ : ಬೆಂಗಳೂರು
ದಿನಾಂಕ : 16.07.2022

## ಅನುಬಂಧ-ಸಿ

| ಕ್ರ. ಸಂ. | ವಿವರಗಳು | ಷರಾ |
|---|---|---|
| 1. | ಮೇಲೆ ಹೇಳಿದ ಅಧಿಕಾರಗಳ ಪ್ರತ್ಯಾಯೋಜನೆ ಅನ್ವಯ ಬ್ಯಾಂಕ್‌ಗಳಲ್ಲಿನ ಎಲ್ಲಾ ಬ್ಯಾಂಕ್ ಖಾತೆಗಳು/ಸ್ಥಿರ ಠೇವಣಿಗಳು ಸಹಿಯಾದ ಅಧಿಕಾರ ಮತ್ತು ಅನುಮೋದನೆಗಳೊಂದಿಗೆ ತೆರೆಯಲಾಗಿದೆಯೇ? | ಹೌದು |
| 2. | ಬ್ಯಾಂಕ್ ಸಮನ್ವಯ ಹೇಳಿಕೆಯನ್ನು ಸಿದ್ಧಪಡಿಸುವ ನಿಯತಕಾಲಿಕ ವ್ಯವಸ್ಥೆ ಇದೆಯೇ ಹಾಗೂ ಲೆಕ್ಕಪರಿಶೋಧನೆ ಪರಿಶೀಲನೆಗಾಗಿ ಅವುಗಳನ್ನು ತಯಾರಿಸಲಾಗಿದೆಯೇ? | ಹೌದು |
| 3. | ಮುಖ್ಯ ಖಾತೆ ಮತ್ತು ಎಲ್ಲಾ ಅಧೀನ ಬ್ಯಾಂಕ್ ಖಾತೆಗಳನ್ನು ಹೊಂದಾಣಿಕೆ ಮಾಡಲಾಗಿದೆಯೇ? | ಹೌದು |
| 4. | ಬ್ಯಾಂಕ್ ಖಾತೆಗಳನ್ನು ನಿರ್ವಹಿಸುವ ಅಧಿಕಾರವನ್ನು ಒಬ್ಬರೇ ಸಹಿದಾರರಿಗೆ ನೀಡಲಾಗಿದೆಯೇ? | ಹೌದು |
| 5. | ನಿಶ್ಚಿತ ಠೇವಣಿಯ ಸಂಪೂರ್ಣ ಅವಧಿಯ ಬಡ್ಡಿಯನ್ನು ಖಾತೆಗಳ ಪುಸ್ತಕಗಳಲ್ಲಿ ಲೆಕ್ಕ ಹಾಕಲಾಗಿದೆಯೇ? | ಸಂಚಿತ ಆಧಾರದ ಮೇಲೆ ಠೇವಣಿಯ ಮೇಲಿನ ಬಡ್ಡಿ |
| 6. | ನಗದು ಭೌತಿಕ ಪರಿಶೀಲನೆಯು ನಿಯತಕಾಲಿಕವಾಗಿ ನಡೆದಿದೆಯೇ? | ಹೌದು |
| 7. | ಆಯವ್ಯಯ ಪಟ್ಟಿಯಲ್ಲಿ ತೋರಿಸಿರುವಂತೆ ಕೈಯಲ್ಲಿರುವ ನಗದು ಹಣವು, ನಗದು ಭೌತಿಕ ಪರಿಶೀಲನೆಯ ಪ್ರಮಾಣಪತ್ರದೊಂದಿಗೆ ತಾಳೆಯಾಗುತ್ತದೆಯೇ? | ಹೌದು |
| 8. | ಮೊತ್ತಗಳು, ಮುಕ್ತಾಯ ದಿನಾಂಕಗಳು, ಬಡ್ಡಿದರಗಳು ಮತ್ತು ಮಧ್ಯಂತರ ಪಾವತಿಯ ದಿನಾಂಕಗಳನ್ನು ತೋರಿಸುವ ಸ್ಥಿರ ಠೇವಣಿಗಳ ನೋಂದಣಿ ಪುಸ್ತಕ ಇದೆಯೇ? | ಇಲ್ಲ |
| 9. | ಸ್ಥಿರ ಠೇವಣಿಯ ಮೇಲಿನ ಬಡ್ಡಿಯನ್ನು ಗಡುವು ದಿನಾಂಕದಂದು ಸ್ವೀಕರಿಸಲಾಗಿದೆ ಎಂದು ಖಚಿತಪಡಿಸಿಕೊಳ್ಳಲು ಅನುಸರಣಾ ವ್ಯವಸ್ಥೆ ಇದೆಯೇ? | ಹೌದು |
| 10. | ಅವಧಿ ಮುಗಿದ ಸ್ಥಿರ ಠೇವಣಿಗಳ ಮೊತ್ತದ ವರ್ಗಾವಣೆಯನ್ನು ಯಾವುದೇ ವಿಳಂಬವಿಲ್ಲದೇ ಮಾಡಲಾಗುತ್ತದೆ ಎಂದು ಖಚಿತಪಡಿಸಿಕೊಳ್ಳಲು ಅನುಸರಣಾ ವ್ಯವಸ್ಥೆ ಇದೆಯೇ? | ಹೌದು |
| 11. | ಉಳಿತಾಯ ಖಾತೆ, ಚಾಲ್ತಿ ಖಾತೆ ಮತ್ತು ಸ್ಥಿರ ಠೇವಣಿ: ಈ ಎಲ್ಲಾ ಖಾತೆಗಳಿಗೆ ಬ್ಯಾಂಕುಗಳಿಂದ ನಿಯತಕಾಲಿಕವಾಗಿ ಬ್ಯಾಂಕ್ ದೃಢೀಕರಣ ಹೇಳಿಕೆಗಳನ್ನು ಪಡೆಯಲಾಗಿದೆಯೇ? | ಹೌದು |
| 12. | ಎಲ್ಲಾ ಬ್ಯಾಂಕ್ ಉಳಿತಾಯಗಳಿಗೆ ಸಂಬಂಧಿಸಿದ ಉಳಿತಾಯ ದೃಢೀಕರಣ ಬ್ಯಾಂಕ್ ಹೇಳಿಕೆಗಳೊಂದಿಗೆ ತಾಳೆಯಾಗುತ್ತದೆಯೇ? | ಹೌದು . ಬ್ಯಾಂಕ್ ಹೊಂದಾಣಿಕೆಗೆ ಒಳಪಟ್ಟಿರುತ್ತದೆ |
| 13. | ನೋಂದಣಿಯಾದ ಸ್ಥಿರ ಠೇವಣಿಗಳ ಅನ್ವಯ, ಸ್ಥಿರ ಠೇವಣಿಗಳು ಮತ್ತು ಬಡ್ಡಿಗಳು, ಬ್ಯಾಂಕ್ ನೀಡಿದ ದೃಢೀಕರಣ ಪ್ರಮಾಣಪತ್ರದೊಂದಿಗೆ ತಾಳೆಯಾಗುತ್ತದೆಯೇ? | ಹೌದು |
| 14. | ಬ್ಯಾಂಕ್‌ಗಳಿಂದ ಸ್ವೀಕರಿಸಿದ ದೃಢೀಕರಣ ಹೇಳಿಕೆಗಳು ಲೆಟರ್‌ಹೆಡ್‌ನಲ್ಲಿ ಬ್ಯಾಂಕ್‌ನಿಂದ ದೃಢೀಕರಿಸಲಾಗಿದೆಯೇ? | ಹೌದು |
| 15. | ಮೇಲಿನ ಪರಿಶೀಲನೆಯಲ್ಲಿ ಯಾವುದೇ ವ್ಯತ್ಯಾಸ ಕಂಡುಬಂದಲ್ಲಿ ನಂತರದ ವರ್ಷದಲ್ಲಿ ಅದನ್ನು ಸರಿಹೊಂದಿಸಲಾಗಿದೆಯೇ? | ಅನ್ವಯಿಸುವುದಿಲ್ಲ. |
| 16. | ಪರೀಕ್ಷಿಸಿದ ಪ್ರಕರಣಗಳಲ್ಲಿ ಬ್ಯಾಂಕ್‌ಗಳಿಂದ ಬಾಹ್ಯ ದೃಢೀಕರಣ ಪಡೆದಿದ್ದಲ್ಲಿ, ಅದರ ವಿವರಗಳು | ಇಲ್ಲ |
| 17. | ಶಾಸನಬದ್ಧ ಲೆಕ್ಕಪರಿಶೋಧಕರಿಂದ ಆಂತರಿಕ ಹಣಕಾಸು ನಿಯಂತ್ರಣಗಳ ವರದಿಯಲ್ಲಿ ಮೇಲೆ ಹೇಳಲಾದ ಯಾವುದೇ ಲೋಪಗಳನ್ನು ಹೊರತರಲಾಗಿದೆಯೇ, ಇಲ್ಲದಿದ್ದರೇ, ಲೆಕ್ಕಪರಿಶೋಧನೆ ವಿಚಾರಣೆಯನ್ನು ನಡೆಸಲಾಗಿದೆಯೇ? | ಅನ್ವಯಿಸುವುದಿಲ್ಲ. |

**ಅಣ್ಣಾರಾವ್ & ಶ್ರೀಕಂಠ ಪರವಾಗಿ**
**ಚಾರ್ಟರ್ಡ್ ಅಕೌಂಟೆಂಟ್ಸ್**
**ಎಫ್‌ಆರ್‌ಎನ್ : 009255S**
**ಸಹಿ/-**
**ಸಿಎ ಶ್ರೀಕಂಠ ಜಿ. ಕುಲಕರ್ಣಿ**
**ಪಾಲುದಾರರು**
**ಸದಸ್ಯತ್ವ ಸಂ. 027422**
**ಯುಡಿಐಎನ್: 22027422ANKWDE9724**

ಸ್ಥಳ : ಬೆಂಗಳೂರು
ದಿನಾಂಕ : 16.07.2022

## ಅನುಸರಣೆಯ ಪ್ರಮಾಣಪತ್ರ

ನಾವು ಬೆಂಗಳೂರು ವಿಮಾನ ನಿಲ್ದಾಣ ರೈಲು ಸಂಪರ್ಕ ನಿಯಮಿತದ ದಿನಾಂಕ 31ನೇ ಮಾರ್ಚ್ 2022ಕ್ಕೆ ಕೊನೆಗೊಂಡ ಹಣಕಾಸಿನ ಹೇಳಿಕೆಗಳ ಲೆಕ್ಕಪರಿಶೋಧನೆಯನ್ನು ಕಂಪನಿಗಳ ಕಾಯ್ದೆ 2013ರ ಕಲಂ 143(5) ರನ್ವಯ ಭಾರತದ ನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರು ನೀಡಿದ ನಿರ್ದೇಶನಗಳು/ಉಪ ನಿರ್ದೇಶನಗಳ ಅನುಸಾರ ನಡೆಸಿದ್ದೇವೆ ಮತ್ತು ನಮಗೆ ನೀಡಿದ ಎಲ್ಲಾ ನಿರ್ದೇಶನಗಳು/ಉಪ ನಿರ್ದೇಶನಗಳನ್ನು ನಾವು ಅನುಸರಣೆ ಮಾಡಿರುವುದಾಗಿ ನಮಗೆ ತಿಳಿದಿರುವಂತೆ ಮತ್ತು ನಮ್ಮ ನಂಬಿಕೆಗೆ ಅನುಸಾರವಾಗಿ ದೃಢಪಡಿಸುತ್ತೇವೆ.

**ಅಣ್ಣಾರಾವ್ & ಶ್ರೀಕಂಠ ಪರವಾಗಿ**
**ಚಾರ್ಟರ್ಡ್ ಅಕೌಂಟೆಂಟ್ಸ್**
**ಎಫ್‌ಆರ್‌ಎನ್ : 009255S**
**ಸಹಿ/-**
**ಸಿಎ ಶ್ರೀಕಂಠ ಜಿ. ಕುಲಕರ್ಣಿ**
**ಪಾಲುದಾರರು**
**ಸದಸ್ಯತ್ವ ಸಂ. 027422**
**ಯುಡಿಐಎನ್: 22027422ANKWDE9724**

ಸ್ಥಳ : ಬೆಂಗಳೂರು
ದಿನಾಂಕ : 16.07.2022

# PART - I
# Balance Sheet as at March 31, 2022

| PARTICULARS | Notes No. | As at March 31, 2022 Rs. in lakhs | | As at March 31, 2021 Rs. in lakhs | |
|---|---|---|---|---|---|
| **I. EQUITY AND LIABILITIES** | | | | | |
| 1. Shareholders' Funds | | | | | |
| a) Share Capital | 1.0 | **500.00** | | 500.00 | |
| b) Reserves and Surplus | 2.0 | **(376.26)** | | (380.94) | |
| | | | **123.74** | | 119.06 |
| 2. Non-Current Liabilities | | | | | |
| a) Deferred Tax Liabilities (Net) | 3.1 | | **0.00** | | 0.02 |
| b) Other Long-Term Liabilities | 3.2 | | **0.00** | | 0.00 |
| 3. Current Liabilities | 4.0 | | | | |
| a) Trade Payables | | | | | |
| - Total outstanding dues to MSMEs | | **0.00** | | 0.00 | |
| - Total outstanding dues of creditors other than MSMEs | 4.1 | **0.00** | | 0.00 | |
| b) Other Current Liabilites | 4.2 | **0.54** | | 0.54 | |
| c) Short-Term Provisions | 4.3 | **1.40** | | 0.00 | |
| | | | **1.94** | | 0.54 |
| **TOTAL** | | | **125.68** | | 119.62 |
| **II. ASSETS** | | | | | |
| (1) Non-current Assets | | | | | |
| (a) Fixed Assets | 5.0 | | | | |
| (i) Tangible Assets (net) | 5.1 | | **0.05** | | 0.12 |
| (ii) Intangible Assets (net) | 5.2 | | **0.00** | | 0.00 |
| (b) Deferred tax assets (net) | 6.0 | | **0.00** | | 0.00 |
| (c) Long-term loans and advances | 7.0 | | **0.00** | | 0.00 |
| (2) Current assets | | | | | |
| (a) Cash and Cash Equivalents | 8.1 | **123.51** | | 79.10 | |
| (b) Short-Term Loans & Advances | 8.2 | **0.55** | | 39.34 | |
| (c) Other Current Assets | 8.3 | **1.57** | | 1.06 | |
| | | | **125.63** | | 119.50 |
| **TOTAL** | | | **125.68** | | 119.62 |
| See accompanying Significant Accounting Policies and Notes to the Financial Statements | 16.0 | | | | |

For and on behalf of the Board of Directors

Sd/-
**(KALPANA KATARIA)**
Managing Director
DIN: 08163396

Sd/-
**(ANJUM PARWEZ)**
Director
DIN: 02834758

In terms of our Report attached
**For ANNARAO & SHRIKANTA**
Chartered Accountants
Firm Registration No. 09255S
Sd/-
**(CA SHRIKANTA G KULKARNI)**
Membership No. 027422
Partner
UDIN: 22027422ANKWDE9724

Place: Bengaluru
Date : 16.07.2022

Date: 16.07.2022

**CIN: U63031KA2008SGC045831/2007-08 ,**

ನೋಂದಾಯಿತ ಕಚೇರಿ: 4ನೇ ಮಹಡಿ, ಬಿಎಂಆರ್‌ಸಿಎಲ್ ಸೈಟ್ ಆಫೀಸ್, ದೀಪಾಂಜಲಿ ನಗರ, ಮೈಸೂರು ರಸ್ತೆ , ಬೆಂಗಳೂರು–560 026.

## ಭಾಗ-1

## 31ನೇ ಮಾರ್ಚ್ 2022ರಲ್ಲಿದ್ದಂತೆ ಆಯವ್ಯಯ ಪಟ್ಟಿ

| ವಿವರಗಳು | ಟಿಪ್ಪಣಿ ಸಂಖ್ಯೆ | 31.03.2022ರಲ್ಲಿದ್ದಂತೆ ರೂ. ಲಕ್ಷಗಳಲ್ಲಿ | | 31.03.2021ರಲ್ಲಿದ್ದಂತೆ ರೂ. ಲಕ್ಷಗಳಲ್ಲಿ | |
|---|---|---|---|---|---|
| **1. ಈಕ್ವಿಟಿ ಮತ್ತು ಹೊಣೆಗಾರಿಕೆಗಳು** | | | | | |
| **1. ಷೇರುದಾರರ ನಿಧಿಗಳು** | | | | | |
| ಎ) ಷೇರು ಬಂಡವಾಳ | 1.0 | **500.00** | | 500.00 | |
| ಬಿ) ಮೀಸಲು ಮತ್ತು ಹೆಚ್ಚುವರಿ | 2.0 | **(376.26)** | | (380.94) | |
| | | | **123.74** | | 119.06 |
| **2. ಚಾಲ್ತಿಯೇತರ ಹೊಣೆಗಾರಿಕೆಗಳು** | | | | | |
| ಎ) ಮುಂದೂಡಿದ ತೆರಿಗೆ ಹೊಣೆಗಾರಿಕೆಗಳು (ನಿವ್ವಳ) | 3.1 | | **0.00** | | 0.02 |
| ಬಿ) ಇತರೆ ದೀರ್ಘಾವಧಿ ಹೊಣೆಗಾರಿಕೆಗಳು | 3.2 | | **0.00** | | 0.00 |
| **3. ಚಾಲ್ತಿ ಹೊಣೆಗಾರಿಕೆಗಳು** | 4.0 | | | | |
| ಎ) ವ್ಯಾಪಾರದ ಸಂಬಂಧ ಪಾವತಿಸಬೇಕಾದದ್ದು | | | | | |
| - ಎಂಎಸ್‌ಎಂಇಗಳಿಗೆ ಪಾವತಿಸಬೇಕಿರುವ ಒಟ್ಟು ಬಾಕಿಗಳು | | **0.00** | | 0.00 | |
| - ಎಂಎಸ್‌ಎಂಇಗಳು ಹೊರತಾಗಿ ಸಾಲಗಾರರಿಗೆ ಪಾವತಿಸಬೇಕಾಗಿರುವ ಒಟ್ಟು ಬಾಕಿಗಳು | 4.1 | **0.00** | | 0.00 | |
| ಬಿ) ಇತರೆ ಚಾಲ್ತಿ ಹೊಣೆಗಾರಿಕೆಗಳು | 4.2 | **0.54** | | 0.54 | |
| ಸಿ) ಅಲ್ಪಾವಧಿ ಮುನ್ನೇರ್ಪಾಡುಗಳು | 4.3 | **1.40** | | 0.00 | |
| | | | **1.94** | | 0.54 |
| **ಒಟ್ಟು** | | | **125.68** | | 119.62 |
| **II. ಆಸ್ತಿಗಳು** | | | | | |
| **ಚಾಲ್ತಿಯೇತರ ಆಸ್ತಿಗಳು** | | | | | |
| **(1) (ಎ) ಸ್ಥಿರಾಸ್ತಿಗಳು** | 5.0 | | | | |
| (i) ಗೋಚರ ಆಸ್ತಿಗಳು (ನಿವ್ವಳ) | 5.1 | | **0.05** | | 0.12 |
| (ii) ಅಗೋಚರ ಆಸ್ತಿಗಳು (ನಿವ್ವಳ) | 5.2 | | **0.00** | | 0.00 |
| **(ಬಿ) ಮುಂದೂಡಿದ ತೆರಿಗೆ ಸಂಬಂಧಿತ ಆಸ್ತಿಗಳು (ನಿವ್ವಳ)** | 6.0 | | **0.00** | | 0.00 |
| **(ಸಿ) ದೀರ್ಘಾವಧಿ ಸಾಲಗಳು ಮತ್ತು ಮುಂಗಡಗಳು** | 7.0 | | **0.00** | | 0.00 |
| **(2) ಚಾಲ್ತಿ ಆಸ್ತಿಗಳು** | | | | | |
| (ಎ) ನಗದು ಮತ್ತು ನಗದಿಗೆ ಸಮಾನವಾದದ್ದು | 8.1 | **123.51** | | 79.10 | |
| (ಬಿ) ಅಲ್ಪಾವಧಿ ಸಾಲಗಳು ಮತ್ತು ಮುಂಗಡಗಳು | 8.2 | **0.55** | | 39.34 | |
| (ಸಿ) ಇತರೆ ಚಾಲ್ತಿ ಆಸ್ತಿಗಳು | 8.3 | **1.57** | | 1.06 | |
| | | | **125.63** | | 119.50 |
| **ಒಟ್ಟು** | | | **125.68** | | 119.62 |
| **ಹಣಕಾಸು ಪಟ್ಟಿಗೆ ಲಗತ್ತಿಸಿರುವ ಗಮನಾರ್ಹ ಲೆಕ್ಕ ನೀತಿಗಳು ಮತ್ತು ಟಿಪ್ಪಣಿಗಳನ್ನು ನೋಡಿ** | 16.0 | | | | |

ನಿರ್ದೇಶಕರ ಮಂಡಳಿ ಹೆಸರಿನಲ್ಲಿ ಮತ್ತು ಪರವಾಗಿ

ಸಹಿ/-
**(ಕಲ್ಪನಾ ಕಠಾರಿಯಾ)**
ವ್ಯವಸ್ಥಾಪಕ ನಿರ್ದೇಶಕರು
ಡಿಐಎನ್ : 08163396

ಸಹಿ/-
**(ಅಂಜುಮ್ ಪರ್ವೇಜ್)**
ನಿರ್ದೇಶಕರು
ಡಿಐಎನ್ : 02834758

ಲಗತ್ತಿಸಿದ ನಮ್ಮ ವರದಿ ಅನ್ವಯ
**ಅಣ್ಣಾರಾವ್ & ಶ್ರೀಕಂಠ ಪರವಾಗಿ**
ಚಾರ್ಟರ್ಡ್ ಅಕೌಂಟೆಂಟ್ಸ್
ನೋಂದಣಿ ಸಂಖ್ಯೆ : **009255S**
ಸಹಿ/- **(ಸಿಎ ಶ್ರೀಕಂಠ ಜಿ. ಕುಲಕರ್ಣಿ)**
ಪಾಲುದಾರರು
ಸದಸ್ಯತ್ವ ಸಂ. 027422
ಯುಡಿಐಎನ್: 22027422ANKWDE9724
ದಿನಾಂಕ: 16.07.2022

ಸ್ಥಳ : ಬೆಂಗಳೂರು
ದಿನಾಂಕ : 16.07.2022

**CIN: U63031KA2008SGC045831/2007-08 ,**
Registered Office at 4th Floor, BMRCL Site Office, Deepanjalinagar, Mysore Road, Bengaluru-560 026.

## PART-II
## STATEMENT OF PROFIT & LOSS FOR THE YEAR ENDED MARCH 31, 2022

Rs. In lakhs

| PARTICULARS | NOTES NUMBER | FOR THE YEAR ENDED MARCH 31, 2022 | FOR THE YEAR ENDED MARCH 31, 2021 |
|---|---|---|---|
| **I. REVENUE FROM OPERATIONS** | | **0.00** | 0.00 |
| **II. OTHER INCOME** | 9.0 | **15.94** | 2.44 |
| **III. TOTAL REVENUE (I+II)** | | **15.94** | **2.44** |
| **IV. EXPENSES** | | | |
| Employee benefits expenses | 10.0 | **4.34** | 7.65 |
| Finance Cost- Bank Chages | 11.0 | **0.01** | 0.02 |
| Depreciation and amortization expenses | 12.0 | **0.07** | 0.18 |
| Other Expenses | 13.0 | **2.55** | 11.97 |
| **TOTAL EXPENSES** | | **6.97** | **19.82** |
| **V. PROFIT/LOSS BEFORE EXCEPTIONAL AND EXTRAORDINARY ITEMS AND TAX (III-IV)** | | **8.97** | (17.38) |
| **VI. Exceptional Items** | | **0.00** | 0.00 |
| **VII. PROFIT / LOSS BEFORE EXTRAORDINARY ITEMS AND TAX (V-VI)** | | **8.97** | (17.38) |
| **VIII. EXTRAORDINARY ITEMS** | 14.0 | **0.00** | 0.0 |
| **IX. PROFIT/ LOSS BEFORE TAX (VII-VIII)** | | **8.97** | (17.38) |
| **X. Tax Expenses** | | | |
| a) Income Tax relating to previous year | | **2.91** | 0.00 |
| b) Current Tax | | **1.40** | 0.00 |
| c) Deferred Tax | 15.0 | **0.02** | 1.60 |
| **XI. PROFIT/LOSS(-) FOR THE PERIOD (IX-X)** | | **4.68** | **(18.98)** |
| Earning per equity share (Nominal value per share Rs. 10) | | | |
| Basic (in Re.) | | **0.18** | (0.38) |
| Diluted (excluding prior period items) (in Re.) | | **0.18** | (0.38) |
| Number of equity shares for computation of EPS | | **4999996** | **4999996** |
| **See accompanying Significant Accounting Policies and Notes to the Financial Statements** | 16 | | |

For and on behalf of the Board of Directors

Sd/-
**(KALPANA KATARIA)**
Managing Director
DIN: 08163396

Sd/-
**(ANJUM PARWEZ)**
Director
DIN: 02834758

In terms of our Report attached
**For ANNARAO & SHRIKANTA**
Chartered Accountants
Firm Registration No. 09255S
Sd/-
**(CA SHRIKANTA G KULKARNI)**
Membership No. 027422
Partner
UDIN: 22027422ANKWDE9724

Place: Bengaluru
Date : 16.07.2022

Date: 16.07.2022

## ಭಾಗ-2

## 2022ರ ಮಾರ್ಚ್ 31ಕ್ಕೆ ಅಂತ್ಯಗೊಂಡ ಅವಧಿಗೆ ಲಾಭ-ನಷ್ಟದ ತಃಖ್ತೆ

(ರೂ. ಲಕ್ಷಗಳಲ್ಲಿ)

| ವಿವರಗಳು | ಟಿಪ್ಪಣಿ ಸಂಖ್ಯೆ | 31.03.2022ರಲ್ಲಿದ್ದಂತೆ | 31.03.2021ರಲ್ಲಿದ್ದಂತೆ |
|---|---|---|---|
| **I. ವಹಿವಾಟಿನಿಂದ ಬಂದ ಆದಾಯ** | | **0.00** | 0.00 |
| **II. ಇತರೆ ಆದಾಯ** | 9.0 | **15.94** | 2.44 |
| **III. ಒಟ್ಟಾರೆ ಆದಾಯ (I+II)** | | **15.94** | 2.44 |
| **IV. ಖರ್ಚುಗಳು** | | | |
| ನೌಕರರ ಹಿತಕ್ಕಾಗಿ ವೆಚ್ಚಗಳು | 10.0 | **4.34** | 7.65 |
| ಹಣಕಾಸಿನ ವೆಚ್ಚ - ಬ್ಯಾಂಕ್ ವೆಚ್ಚಗಳು | 11.0 | **0.01** | 0.02 |
| ಸವಕಳಿ ಮತ್ತು ಅಮಾರ್ಟೈಸೇಷನ್ ವೆಚ್ಚಗಳು | 12.0 | **0.07** | 0.18 |
| ಇತರೆ ವೆಚ್ಚಗಳು | 13.0 | **2.55** | 11.97 |
| **ಒಟ್ಟು ಖರ್ಚುಗಳು** | | **6.97** | 19.82 |
| **V. ಅಸಾಮಾನ್ಯ ಮತ್ತು ಅಸಾಧಾರಣ ಬಾಬ್ತು ಮತ್ತು ತೆರಿಗೆಗೆ ಮೊದಲು ಲಾಭ/ನಷ್ಟ (III-IV)** | | **8.97** | (17.38) |
| **VI. ವಿಶೇಷವಾದ ಬಾಬ್ತುಗಳು** | | **0.00** | 0.00 |
| **VII. ಅಸಾಧಾರಣ ಬಾಬ್ತು ಮತ್ತು ತೆರಿಗೆ ಮೊದಲು ಲಾಭ/ನಷ್ಟ (-) (V-VI)** | | **8.97** | (17.38) |
| **VIII. ಅಸಾಧಾರಣ ಬಾಬ್ತುಗಳು** | 14.0 | **0.00** | 0.0 |
| **IX. ತೆರಿಗೆಗೆ ಮುಂಚೆ ಲಾಭ/ನಷ್ಟ (VII-VIII)** | | **8.97** | (17.38) |
| **X. ತೆರಿಗೆ ಖರ್ಚುಗಳು** | | | |
| ಎ) ಹಿಂದಿನ ವರ್ಷದ ಆದಾಯ ತೆರಿಗೆ | | **2.91** | 0.00 |
| ಬಿ) ಚಾಲ್ತಿ ತೆರಿಗೆ | | **1.40** | 0.00 |
| ಸಿ) ಮುಂದೂಡಿದ ತೆರಿಗೆ | 15.0 | **0.02** | 1.60 |
| **XI. ಅವಧಿಯ ಲಾಭ/ನಷ್ಟ(-) (IX-X)** | | **4.68** | (18.98) |
| ಈಕ್ವಿಟಿ ಷೇರು ಒಂದರ ಸಂಪಾದನೆ (ಷೇರು ಒಂದರ ಸಾಧಾರಣ ಮೌಲ್ಯ ರೂ.10/-) | | | |
| ಮೂಲ (ರೂ.ಗಳಲ್ಲಿ) | | **0.18** | (0.38) |
| ಡೈಲ್ಯೂಟ್ ಮಾಡಿದ (ಪೂರ್ವಾವಧಿ ಬಾಬ್ತು ಹೊರತುಪಡಿಸಿ) (ರೂ.ಗಳಲ್ಲಿ) | | **0.18** | (0.38) |
| ಇಪಿಎಸ್ ಕಂಪ್ಯೂಟೇಷನ್‌ಗೆ ಒಳಪಟ್ಟ ಈಕ್ವಿಟಿ ಷೇರುಗಳ ಸಂಖ್ಯೆ | | **4999996** | 4999996 |
| **ಹಣಕಾಸು ಪಟ್ಟಿಗೆ ಲಗತ್ತಿಸಿರುವ ಗಮನಾರ್ಹ ಅಕೌಂಟಿಂಗ್ ನೀತಿಗಳು ಮತ್ತು ಟಿಪ್ಪಣಿಗಳನ್ನು ನೋಡಿ** | 16 | | |

ನಿರ್ದೇಶಕರ ಮಂಡಳಿ ಹೆಸರಿನಲ್ಲಿ ಮತ್ತು ಪರವಾಗಿ

ಸಹಿ/-
**(ಕಲ್ಪನಾ ಕಠಾರಿಯಾ)**
ವ್ಯವಸ್ಥಾಪಕ ನಿರ್ದೇಶಕರು
ಡಿಐಎನ್ : 08163396

ಸಹಿ/-
**(ಅಂಜುಮ್ ಪರ್ವೇಜ್)**
ನಿರ್ದೇಶಕರು
ಡಿಐಎನ್ : 02834758

ಲಗತ್ತಿಸಿದ ನಮ್ಮ ವರದಿ ಅನ್ವಯ
**ಅಣ್ಣಾರಾವ್ & ಶ್ರೀಕಂಠ ಪರವಾಗಿ**
ಚಾರ್ಟರ್ಡ್ ಅಕೌಂಟೆಂಟ್ಸ್
ನೋಂದಣಿ ಸಂಖ್ಯೆ : **009255S**
ಸಹಿ/- **(ಸಿಎ ಶ್ರೀಕಂಠ ಜಿ. ಕುಲಕರ್ಣಿ)**
ಪಾಲುದಾರರು
ಸದಸ್ಯತ್ವ ಸಂ. 027422
ಯುಡಿಐಎನ್: 22027422ANKWDE9724
ದಿನಾಂಕ: 16.07.2022

ಸ್ಥಳ : ಬೆಂಗಳೂರು
ದಿನಾಂಕ : 16.07.2022

**CIN: U63031KA2008SGC045831/2007-08 ,**
Registered Office at 4th Floor, BMRCL Site Office, Deepanjalinagar, Mysore Road, Bengaluru-560 026.

## Cash flow statement for the year ended 31st March 2022

**(Rs.in lakhs)**

| Sl. No. | Particulars | | FOR THE YEAR ENDED MARCH 31, 2022 | FOR THE YEAR ENDED MARCH 31, 2021 |
|---|---|---|---|---|
| A | **Cash flow from operating activities** | | | |
| | Net Profit/loss before tax | | **8.97** | (17.38) |
| | Adjusted for interest received | | **(15.94)** | (2.44) |
| | Depreciation and amortisation (Non-cash Expenditure) | | **0.07** | 0.18 |
| | Income tax related to earlier/current years | | **(1.40)** | 0.00 |
| | Provision for Taxation | | **(2.91)** | (1.60) |
| | Prior period income accounted | | **0.00** | 0.00 |
| | Operating Profit before working capital changes | | **(11.21)** | (21.24) |
| | Operating Profit before working capital changes including prior period profit | | | |
| | Increase/Decrease in Loans and advances | | **38.79** | 24.47 |
| | Increase/(Decrease) in current Liabilities | | **1.40** | (9.94) |
| | Increase/(Decrease) in non-current Liabilities | | **0.00** | 0.03 |
| | Increase/(Decrease) in long-term liabilities | | **0.00** | (68.06) |
| | (Increase)/Decrease in other current assets | | **(0.51)** | (0.55) |
| | Increase/(Decrease) in non-current assets | | **0.00** | 1.58 |
| | Net cash from Operating activities including Prior period item | {A} | **28.47** | **(73.71)** |
| B | **Cash flow from investing activities** | | | |
| | Interest Received | | **15.94** | 2.44 |
| | Purchase of fixed assets/sale of fixed assets | | **0.00** | 1.20 |
| | | {B} | **15.94** | **3.64** |
| C | **Cash flow from financing Activities** | | | |
| | Increase/(Decrease) in Non current loans and advances | | **0.00** | 71.18 |
| | Net cash used in investing Activities including Prior Period items | {C} | **0.00** | 71.18 |
| | **Net Cash Flow {A+B+C}** | | **44.41** | **1.11** |
| | Opening Cash & Cash Equivalents | | **79.10** | 77.99 |
| | Cash and cash equivalents at the end of the year | | **123.51** | 79.10 |
| | **Closing cash Balance** | | **123.51** | **79.10** |

For and on behalf of the Board of Directors

Sd/-
**(KALPANA KATARIA)**
Managing Director
DIN: 08163396

Sd/-
**(ANJUM PARWEZ)**
Director
DIN: 02834758

Place: Bengaluru
Date : 16.07.2022

In terms of our Report attached
**For ANNARAO & SHRIKANTA**
Chartered Accountants
Firm Registration No. 09255S
Sd/-
**(CA SHRIKANTA G KULKARNI)**
Membership No. 027422
Partner
UDIN: 22027422ANKWDE9724

Date: 16.07.2022

## ಬೆಂಗಳೂರು ವಿಮಾನ ನಿಲ್ದಾಣ ರೈಲು ಸಂಪರ್ಕ ನಿಯಮಿತ

**CIN: U63031KA2008SGC045831/2007-08 ,**

ನೋಂದಾಯಿತ ಕಚೇರಿ: 4ನೇ ಮಹಡಿ, ಬಿಎಂಆರ್‌ಸಿಎಲ್ ಸೈಟ್ ಆಫೀಸ್, ದೀಪಾಂಜಲಿ ನಗರ, ಮೈಸೂರು ರಸ್ತೆ, ಬೆಂಗಳೂರು–560 026.

# 31ನೇ ಮಾರ್ಚ್ 2022ರ ಕೊನೆಗೊಂಡ ವರ್ಷಕ್ಕೆ ಹಣದ ಹರಿವಿನ ಹೇಳಿಕೆ

(ರೂ. ಲಕ್ಷಗಳಲ್ಲಿ)

| ಕ್ರ. ಸಂ. | ವಿವರಗಳು | | 31.03.2022ಕ್ಕೆ ಕೊನೆಗೊಂಡ ವರ್ಷದಲ್ಲಿ | 31.03.2021ಕ್ಕೆ ಕೊನೆಗೊಂಡ ವರ್ಷದಲ್ಲಿ |
|---|---|---|---|---|
| ಎ | **ಕಾರ್ಯಾಚರಣೆ ಚಟುವಟಿಕೆಗಳಿಂದ ಆದ ನಗದು ಹರಿವು** | | | |
| | ತೆರಿಗೆ ಪಾವತಿಗೆ ಮೊದಲು ನಿವ್ವಳ ಲಾಭ/ನಷ್ಟ(–) | | **8.97** | (17.38) |
| | ಪಡೆದ ಬಡ್ಡಿಗೆ ಹೊಂದಾಣಿಕೆ | | **(15.94)** | (2.44) |
| | ಸವಕಳಿ ಮತ್ತು ಅಮಾರ್ಟೈಸೇಷನ್ (ನಗದೇತರ ಖರ್ಚು) | | **0.07** | 0.18 |
| | ಹಿಂದಿನ/ಚಾಲ್ತಿ ವರ್ಷಗಳಿಗೆ ಸಂಬಂಧಿಸಿದ ಆದಾಯ ತೆರಿಗೆ | | **(1.40)** | 0.00 |
| | ತೆರಿಗೆ ವಿಧಿಸಲು ಮುನ್ನೇರ್ಪಾಡು (ಮುಂದೂಡಿದ ತೆರಿಗೆ ಆದಾಯ) | | **(2.91)** | (1.60) |
| | ಲೆಕ್ಕಕ್ಕೆ ತೆಗೆದುಕೊಂಡಿದ್ದ ಹಿಂದಿನ ಅವಧಿಯ ಆದಾಯ | | **0.00** | 0.00 |
